


ಅಪರಂಜಿ

ತಿಳಿನಗೆಯ ಕಾರಂಜಿ

- ☐ ಆನಂದ್
- ☐ ನಳಿನೀಪ್ರಿಯ
- ☐ ಲೀಲಾಮಿರ್ಲೆ
- ☐ ಪಾಟಾಳಿ
- ☐ ಶಿಲಾ ಬಾಲಕ
- ☐ ಗಾಯತ್ರಿ
- ☐ ಮಲ್ಲಿಕಾರ್ಜುನ ಪರಡ್ಡಿ
- ☐ ಶೇಫ
- ☐ ಚಂದ್ರ
- ☐ ಆರತಿ
- ☐ ವಿಶ್ವನಾಥ್
- ☐ ಶಿವು

ಬಿಡಿಪ್ರತಿ :
ಕೇವಲ ಒಂದೂವರೆ ರೂಪಾಯಿ

ಸಂಪುಟ–೪
ಸಂಚಿಕೆ–೫
ಫೆಬ್ರವರಿ–1987



(ತಿಳಿನಗೆಯ ಕಾರಂಜಿ)

ಸಂಪುಟ ೪ ಫೆಬ್ರವರಿ 1987 ಸಂಚಿಕೆ ೫

ಬಿಡಿ ಪ್ರತಿ :—ಕೇವಲ ಒಂದೂವರೆ ರೂಪಾಯಿ

ವಾರ್ಷಿಕ ಚಂದಾ ರೂ. 15/-

ಆಜೀವ ಚಂದಾ : ರೂ. 150/-

ಶಿವಕುಮಾರ್
ಸಂಪಾದಕರು ಮತ್ತು ಪ್ರಕಾಶಕರು

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಅಪರಂಜಿ ಕಾರ್ಯಾಲಯ :
36, 6ನೇ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು–560 003

ಈ ಸಂಚಿಕೆಯಲ್ಲಿ.......

ಮುದ್ರಣ ಇಂಪ್ರೆಷನ್ಸ್, ಬೆಂಗಳೂರು-3 ದೂರವಾಣಿ : 362989, 363444

ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ-೪ ಫೆಬ್ರುವರಿ ೧೯೮೭ ಸಂಚಿಕೆ-೨

ದಬ್ಬಳದ ತುದಿಯಷ್ಟು ಇದ್ದು, ಅಲ್ಪನಾಗಿ ಕಂಡುಬರುತ್ತಾನೆ.

—ಶ್ವೇತಾಶ್ವತರ

ಬುದ್ಧಿಯ ಉಪಾಧಿಯಿಂದ ಜೀವನು ಅಣು ಪ್ರಮಾಣದವನಾಗಿ ಕಂಡುಬರುತ್ತಾನೆಂದು ಉಪನಿಷತ್ತಿನಲ್ಲಿ ಹೇಳಿದೆ, ಅಷ್ಟೇ. ಜೀವನು ವಿಭು, ಹುಟ್ಟು ಸಾವುಗಳಿಲ್ಲದವನು.

ಶ್ರೀ ಸಾಮಾನ್ಯನೂ ಅಷ್ಟೇ. ಅವನೇ ವಿಭು. ಆದರೂ ಭಯೋತ್ಪಾದನೆ, ದೊಂಬಿ, ಗಲಭೆ ಇತ್ಯಾದಿಗಳ ಉಪಾಧಿಯಿಂದ ವಿಶ್ವದಾದ್ಯಂತ ಅನುದಿನವೂ ಅವನನ್ನು ಅಲ್ಪನೆಂದು ಭಾವಿಸಿ ಅವನ ಪ್ರಾಣವನ್ನು ಹರಣ ಮಾಡಲಾಗುತ್ತಿದೆ.

ಇಷ್ಟೊಂದು ರಾಷ್ಟ್ರಗಳು, ಪ್ರಗತಿ, ವಿಜ್ಞಾನ ಸ್ಫೋಟ ಸಿದ್ಧಾಂತಗಳಿದ್ದು, ಮಾಡಿದ್ದೇನನ್ನು ?

ಆಧುನಿಕ ನಾಗರಿಕತೆ, ಯಾವ ವಿಧದಲ್ಲಿ ಹಿಂದಿನವುಗಳಿಗಿಂತ ಉತ್ತಮ ?

ಅಪರಂಜಿ ನೊಂದು, ನಲುಗಿ, ನಗುತ್ತಾಳೆ.

ಅಪರಂಜಿ ಕಿಡಿ

— ಆನಂದ್

ಕೆ.ಜಿ.ಎಫ್. ನಲ್ಲಿ ಖೋಟಾ ನೋಟು ಮುದ್ರಣ ಪತ್ತೆ.

—ಸುದ್ದಿ

ಭೂಗತ ಉದ್ಯಮ ಅಂದರೆ ಬಂಗಾರದ್ದು ಅಂತ ತಿಳುಕೊಂಡಿದ್ವಲ್ಲ !

* * *

ಹಿಂದಿ ವಿರುದ್ಧ ಚಳುವಳಿ ; ಕರುಣಾನಿಧಿ ಬಂಧನ.

—ಮದ್ರಾಸ್ ಸುದ್ದಿ

ಹಿಂದಿಯ ಮೇಲಂತೂ ಅವರಿಗೆ ಕರುಣೆ ಇಲ್ಲ !

* * *

ವಿದೇಶೀ ಶಕ್ತಿಗಳು ಭಾರತವನ್ನು ಎಂದಿಗೂ ಒಡೆಯಲಾರವು.

—ಶ್ರೀ ರಾಜೀವ ಗಾಂಧಿ

ಅದನ್ನು ನಾವೇ ಮಾಡಬಹುದೆಂದೋ ?

* * *

ಮೂರು ವರ್ಷಗಳಲ್ಲಿ ನಗರದಲ್ಲಿ ಅತ್ಯಾಧುನಿಕ ಟೆಲಿಫೋನ್

—ಸುದ್ದಿ

(ಅದರಲ್ಲಿ ರಾಂಗ್ ನಂಬರ್ ಸಿಗೋದೇ ಇಲ್ಲ ಅಂತ ಅಧಿಕಾರಿಗಳು ಧೈರ್ಯ ವಾಗಿದಾರಂತೆ.)

—ಪಾಪ !

* * *

ಸಂಸತ್ ಸದಸ್ಯರು ಸಾರ್ವಜನಿಕರ ಹಿತರಕ್ಷಣೆಗೆ ತಮ್ಮ ಸೇವೆಯನ್ನು ಮುಡು ಪಾಗಿಡಬೇಕು.

—ಶ್ರೀ ವೆಂಕಟರಾಮನ್

ಇದು ಸದಸರಿಗೆ ಆಗಲೇ ಗೊತ್ತಿದೆಯಲ್ಲ ? ?

*   *   *

ಆಸ್ಪತ್ರೆ, ಸೌಲಭ್ಯ ಇಲ್ಲದ ಕಾಲೇಜುಗಳಿಗೆ ಹೊಸದಾಗಿ ಆರಂಭವಾಗಲಿರುವ ಮಣಿಪಾಲ್ ಆಸ್ಪತ್ರೆ ನೆರವಾಗಲಿ.

—ಶ್ರೀ ವೆಂಕಟರಾಮನ್

...ತಾನು ಕಡೋದಲ್ಲದೆ..." ಅನ್ನೋ ಗಾದೆ ಜ್ಞಾಪಕಕ್ಕೆ ಬರುತ್ತೆ !

*   *   *

ಆದಿ ಮಾನವ ಭಾರತೀಯನೆ ?

—ಪಂಜಾಬ್ ಸಂಶೋಧನಾ ತಜ್ಞರು

ಪಂಜಾಬಿನ ಸದ್ಯದ ಪರಿಸ್ಥಿತಿಯಲ್ಲಿ ಮಾನವನ ಅಂತ್ಯದ ಬಗ್ಗೆ ಆಲೋಚನೆ ಸೂಕ್ತ.

*   *   *

ಸಾರ್ಕ್‌ಗಾಗಿ ಸಿದ್ಧಮಾಡಿದ ರಸ್ತೆಗಳೆಲ್ಲ ಬಿರುಕು ಬಿಡುತ್ತಿವೆಯಲ್ಲ ಅಂತ ನಮ್ಮ ಓದುಗರೊಬ್ಬರು ಪ್ರಶ್ನೆ ಹಾಕಿದ್ದಾರೆ.

ಅಂತಾರಾಷ್ಟ್ರೀಯ ಸಂಬಂಧಗಳಂತೆಯೇ ನಮ್ಮ ರಸ್ತೆಗಳೂ ! !

*   *   *

ಕಾಯಿಲೆಗಳನ್ನು ಗುಣಪಡಿಸುವುದಕ್ಕಿಂತ ಕಾಯಿಲೆಗಳೇ ಬರದಂತೆ ಮಾಡು ವುದು ಶ್ರೇಷ್ಠ.

—ಆಸ್ಪತ್ರೆಯೊಂದರ ಸಮಾರಂಭದಲ್ಲಿ ಶ್ರೀ ಜೇಲ್ ಸಿಂಗ್

ಆಸ್ಪತ್ರೆಯ ಅಧಿಕಾರಿಗಳ ಎದೆ ಜಗ್ಗೆಂದಿರಬೇಕು !

ಬೆಂಗಳೂರು ಇಂದು ೧೧

—ನಳಿನೀಪ್ರಿಯ

ಸಿಂಬಯಾಸಿಸ್

ಮೊನ್ನೆ ಜಗ್ಗು ನಮ್ಮ ಮನೆಗೆ ಬಂದಿದ್ದ. ಅವ ಸದಾಶಿವನಗರದ ಖಾಸಗೀ ಶಾಲೆಯೊಂದರಲ್ಲಿ ಬಯಾಲಜಿ ಮೇಷ್ಟ್ರು.

"ಹೇಗಿದೆ ಪಾಠ ಪ್ರವಚನ ? ಸಂಬ್ಳ, ಗಿಂಬ್ಳ ಎಲ್ಲಾ ಸರಿಯಾಗಿ ಕೊಡ್ತಿದಾರೆ ತಾನೇ ?" ಕುಶಲ ವಿಚಾರಿಸಿದೆ.

"ಸಂಬ್ಳ ಏನೂ ಮೋಸ ಇಲ್ಲ ಕಣೋ, ಶ್ರೀಮಂತರ ಮಕ್ಳು ಬರೋದ್ರಿಂದ ಟ್ಯೂಷನ್ ಸಿಕ್ಕಿ ಗಿಂಬ್ಳಾನೂ ತಕ್ಕಮಟ್ಟಿಗೆ ಸಿಕ್ಕುತ್ತೆ. ಆದ್ರೆ ಕಲಿಯೋ ಮಕ್ಕಳು ಶಾರ್ಪಾಗಿಲ್ದೇ ಇದ್ರೆ ಕಲಿಸೋದ್ರಲ್ಲೇನೂ ಮಜಾ ಇರಲ್ಲಮ್ಮ

"ಅದ್ಯಾಕೆ ಹಾಗಂತೀಯೋ ? ನಿಮ್ಮ ಸ್ಕೂಲಿನ ರೆಪ್ಯುಟೇಷನ್ ಚೆನ್ನಾಗೇ ಇದೆಯಲ್ಲಾ.

"ಅದೇನು ಮಹಾ ಬಿಡೋ. ಶಾಲೆ ನಡೆಸೋದು ಒಂದು ಕೈಗಾರಿಕೆ ಆಗಿ ಬಿಟ್ಟಿದೆ ಈಗ. ಒಳ್ಳೇ PRO ಇದ್ರೆ ರೆಪ್ಯುಟೇಷನ್ ತಾನಾಗೇ ಬರುತ್ತೆ.

"ಹೋದ ವಾರ ನೋಡು, ನಾನು ಬಯಾಲಜಿ ಕ್ಲಾಸಲ್ಲಿ ಸಿಂಬಯಾಸಿಸ್ ಅಥವಾ ಪರಸ್ಪರ ಅವಲಂಬನದ ವಿಚಾರ ಪಾಠ ಹೇಳ್ತಾ ಇದ್ದೆ. ಹೇಗೆ ಸಸ್ಯವರ್ಗ ಕಾರ್ಬನ್ ಡೈ ಆಕ್ಸೈಡ್ ಹೀರಿ, ಪ್ರಾಣಿವರ್ಗಕ್ಕೆ ಅಗತ್ಯವಾಗಿರೋ ಆಮ್ಲಜನಕಾನ ಹೊರಬಿಡುತ್ತೆ. ಅದೇ ರೀತಿ ಪ್ರಾಣಿವರ್ಗ ಸಹಾ, ಸಸ್ಯಗಳು ಹೊರದೂಡಿದ ಆಮ್ಲಜನಕಾನ ಉಪಯೋಗಿಸಿಕೊಂಡು, ಸಸ್ಯಗಳಿಗೆ ಬೇಕಾದ ಕಾರ್ಬನ್ ಡೈ ಆಕ್ಸೈಡ್‌ನ ಹೊರಬಿಡುತ್ತವೆ ಅನ್ನೋದನ್ನೆಲ್ಲಾ ಅತ್ಯಂತ ಆಸಕ್ತಿಯಿಂದ ವಿವರಿಸ್ದೆ. ಪಾಠ ಎಲ್ಲಾ ಆದ ಮೇಲೆ 'ನಿಮ್ಮ ಅನುಭವದಲ್ಲಿ ಬಂದಿರೋ, ಪರಸ್ಪರ ಅವಲಂಬನದ ಉದಾಹರಣೆಗಳನ್ನು ಕೊಡಿ' ಅಂತ ಮಕ್ಕಳನ್ನೆಲ್ಲಾ ಒಬ್ಬೊಬ್ಬರ್ನಾಗಿ ಕೇಳ್ದೆ. ಒಂದು ಪಿಳ್ಳೇನಾದ್ರೂ ಬಾಯಿಬಿಡಬೇಕಲ್ಲಾ ? ಕೊನೇಗೆ ನನಗೂ ಬೇಜಾರಾಗೋ

ಹೊತ್ಗೆ, ಹಿಂದಿನ ಬೆಂಚಿನಲ್ಲಿದ್ದ ಸತೀಶ್ ಎದ್ದು ನಿಂತ. ದೊಡ್ಡ ಕಂಟ್ರಾಕ್ಟರ್ ಮಗ ಅವನು. ಸ್ವಲ್ಪ ಮಡ್ಡಿ ಅಂತ್ಲೇ ಹೇಳಬೋದು.

"ಹೇಳು ಸತೀಶ್, ಪರಸ್ಪರ ಅವಲಂಬನಕ್ಕೆ ಉದಾಹರಣೆ ಏನು ?" ಸ್ವಲ್ಪ ಕುಮ್ಮಕ್ ಕೊಟ್ಟೆ.

'ಸರ್ ನಮ್ಮಪ್ಪ ಸರ್ಕಾರದ ಸಿಮೆಂಟ್‌ನೆಲ್ಲಾ, ಮಂತ್ರಿಗಳ ಮನೇ ಕಟ್ಟಾಕ್ಕೆ ಸಾಗಿಸ್ತಿದ್ರು. ನಮ್ಮ ಮಾರಲ್ ಸೈನ್ಸ್‌ನಲ್ಲಿ ಇದು ತಪ್ಪು ಅಂತ ಹೇಳ್ತಾರಲ್ಲಪ್ಪಾ ಅಂತ ಕೇಳ್ದೆ. ಅವರು, ಇಲ್ಲಾ ಮಗೂ ಸಿಮೆಂಟ್ ಸಾಗಿಸಿದ್ರೆ, ನಾವು ಕೇಳಿದಷ್ಟು ರೇಟನ್ನ ನಮಗೆ ಬೇಕಾದಾಗ ಕೊಡ್ತಾರೆ, ಇದು ಪರಸ್ಪರ ಅವಲಂಬನ ಅಷ್ಟೇ ಅಂತ ಹೇಳಿದ್ರೂ ಸರ್' ಅಂದ್ಬಿಟ್ಟಾ ನೋಡೊ ! ಇವರಿಗೆ ಏನು ಪಾಠ ಹೇಳ್ಲಿ ?" ಅಂತ ಪೇಚಾಡಿದ.

"ನೀನು ಪಾಠ ಕಲಿತ್ಕೋಬೇಕು ಕಣೋ, ಹೇಳಿ ಕೊಡುಕ್ಕೆ ಯಾಕೆ ಹೋದೆ ?" ಅಂತ ಬುದ್ಧಿ ಹೇಳಿದೆ.

ಹೊಸ ವರುಷ ತಂದ ಹೊಸ ಹರುಷ

1987ರ ಜನವರಿ ಒಂದನೇ ತಾರೀಖು ! ಬೆಂಗಳೂರಿನ ಪಂಚತಾರಾ ಹೋಟೆಲುಗಳೆಲ್ಲಾ, ಆದ್ಮೀಗೆ ಐನೂರು ಸುಲಿದು, ಭರ್ಜರಿಯಿಂದ ಹೊಸವರುಷಾನ ಇದಿರುಗೊಂಡ ದಿನ. ನನ್ನಮಟ್ಟಿಗೆ ಏಕತಾರಾ ಹೋಟೆಲೇ ಗತಿ ! (ಧರ್ಮಪತ್ನಿಯ ಹೆಸರು ತಾರಾದೇವಿಯೆಂದು ಬೇರೇ ಹೇಳಬೇಕಾಗಿಲ್ಲವಲ್ಲ). ಟಿ.ವಿ.ಯಲ್ಲಿ ಹೊಸ ವರುಷ ಇದಿರುಗೊಂಡು ಬೆಳಗ್ಗೆ ನಿಧಾನವಾಗಿ ಕೂತಿದ್ದೆ. ಸ್ವಂತ ಉದ್ದಿಮೆ ಇದ್ರೆ ಇದೊಂದು ಅನುಕೂಲ ನೋಡಿ. ಕೈಯಲ್ಲಿ ಕಾಸಿಲ್ಲದಿದ್ರೂ, ರಜಾ ಬೇಕಾದ್ರೆ ಬಾಸಿನ ಕೆಂಗಣ್ಣು ನೋಡಬೇಕಾದ ಪ್ರಮೇಯ ಇರೋದಿಲ್ಲ ಹಾಗೇ ಕೂತಿದ್ದಾಗ, ಬಿಪಿನ್ ಮೆಹ್ತಾ ಬಂದ. ಬೆಂಗಳೂರಿನಲ್ಲೇ ಎರಡು ತಲೆಮಾರಿನಿಂದ ಇರೋ ಗುಜರಾತಿ ಕನ್ನಡಿಗ ಬಿಪಿನ್.

"ಏನೋ ಬಿಪಿನ್, ಬಹಳಾ ಖುಷಿಯಿಂದ ಇರೋ ಹಾಗಿದೆ ?"

"ಹಾಗೇನಿಲ್ಲಾ, ನಿನ್ನೆ ರಾತ್ರಿ ಪಂಚತಾರಾ ಹೋಟೆಲೊಂದಕ್ಕೆ ಹೊಸವರುಷ ಇದಿರುಗೊಳ್ಳೋಕ್ಕೆ ದಂಪತಿಗಳು ಹೋಗಿದ್ವಿ. ಆ ಹೋಟೆಲುಗಳು ಗೊತ್ತಲ್ಲಾ. ದೊಡ್ಡೋರೆಲ್ಲಾ ಮಕ್ಕಳ ಆಟ, ಮಕ್ಕಳೆಲ್ಲಾ ದೊಡ್ಡೋರ ಆಟ. ಒಟ್ನಲ್ಲಿ ನನ್ನ ಹೆಂಡ್ತಿಗೆ ಲಕ್ಕಿ ಡಿಪ್‌ನಲ್ಲಿ ಎರಡನೇ ಬಹುಮಾನ ಬಂದು ಬಿದ್ತು"

"ಏನದು ಬಹುಮಾನ ?"

"ಮೊದಲನೇ ಬಹುಮಾನ, ಬೊಂಬಾಯಿಗೆ ಹೋಗಿ ಬರುವ ಎರಡು ವಿಮಾನ ಯಾನದ ಟಿಕೆಟ್‌ಗಳು. ಎರಡನೇ ಬಹುಮಾನ ಒಂದೇ ಟಿಕೆಟ್"

"ಮತ್ತೆ ಇನ್ನೊಂದು ಟಿಕೆಟ್ ನೀನೇ ಕೊಳ್ಳೊಹಾಗಾಯ್ತಲ್ಲೊ !"

"ಯಾಕೆ ? ನಾವು ದುಡ್ಡು ಹಾಕೋದ್ರಿಂದ ಅರ್ಥ ಇಲ್ಲ ಅಂತ ಪೆಂಡ್ತೀಗೆ ವಿವರಿಸ್ದೆ. ಈಗ ಅವಳು ಒಬ್ಳೇ ಒಂದು ವಾರ ಬೊಂಬಾಯಿಗೆ ಹೋಗಿ ಬರ್ತಾಳೆ. ಹೇಗೂ ನಮ್ಮ ಬಂಧುಗಳೆಲ್ಲಾ ಅಲ್ಲೇ ತಾನೇ ಇರೋದು. ಇಂದು ಸಂಜೆ ಹೊರಡ್ತಾಳೆ"

"ಹಾಗನ್ನು. ಈಗರ್ಥವಾಯ್ತು. ಯಾಕೆ ಗಾಳೀ ಮೇಲೆ ನಡೀತಾ ಇದೀಯಾ ಅಂತ !" ಅಂತ ಹೇಳಿ. ಅವನ ಅದೃಷ್ಟ ನೋಡಿ ಹೊಟ್ಟೆ ಉರಿದು ಕೊಂಡೆ.

ವೈದ್ಯನ ವ್ಯಾಧಿ

ನಮ್ಮ ಅಣ್ಣನ ಮಗ ರಮೇಶ ಮಲ್ಟಿ ನ್ಯಾಷನಲ್ ಔಷಧಿ ಸಂಸ್ಥೆಯೊಂದರಲ್ಲಿ ಮಾರಾಟದ ಅಧಿಕಾರಿ. ದಿನ ಬೆಳಗಾದರೆ, ಡೆಲ್ಲಿ, ಬಾಂಬೆ, ಅಂತ ಓಡಾಡ್ತಿರ್ತಾನೆ. ಈಚೆಗೆ ಅವನ್ನ ಬೆಂಗಳೂರಿಗೆ ಹಾಕಿದಾರೆ. ಮೊನ್ನೆ ಸಿಕ್ಕಾಗ ಲೋಕಾಭಿರಾಮವಾಗಿ ಕೆಲಸ ಹೇಗಿದ ಅಂತ ಕೇಳ್ದೆ.

"ಕೆಲಸ ಪರವಾಗಿಲ್ಲ, ಚಿಕ್ಕಪ್ಪಾ. ದೊಡ್ಡ ಆಸ್ಪತ್ರೆ ಡಾಕ್ಟರುಗಳನ್ನು ನೋಡಿ ನಮ್ಮ ಔಷಧಿ ಕೊಳ್ಳೋ ಹಾಗೆ ಮನವೊಲಿಸಿದ್ರೆ ಆಗ್ಹೋಯ್ತು"

"ಅಷ್ಟು ಸುಲಭವೇನೋ ಆ ಕೆಲಸ. ಈಚೆಗೆ ಸಾವಿರಾರು ಔಷಧಿ ಸಂಸ್ಥೆಗಳು ಹುಟ್ಟಿಕೊಂಡಿವೆ. ಕಾಂಪಿಟಿಷನ್ನು ಇರೋಲ್ವೇ ?" ನನ್ನ ವ್ಯವಹಾರ ಜ್ಞಾನ ಪ್ರದರ್ಶಿಸಬೇಕಲ್ಲ.

"ಇಲ್ದೇ ಇರುತ್ಯೇ. ಅದಕ್ಕೇ ನಾವೂನೂ, ಬೆಲೆ ಬಾಳೋ ಔಷಧಿ, ಗ್ಲೂಕೋಸ್ ಪ್ಯಾಕೆಟ್ ಎಲ್ಲಾನೂ ವೈದ್ಯರ ಸ್ಯಾಂಪಲ್ ಅಂತ ಬಿಟ್ಟಿ ಕೊಟ್ಟು, ನಮ್ಮ ವ್ಯಾಪಾರ ಕುದುರಿಸಿಕೊಳ್ತೀವೆ. ಒಂದು ಆಸ್ಪತ್ರೇಲಂತೂ ಒಬ್ಬ ತೀರಾ ದುರಾಶೆ ಇರೋ ವೈದ್ಯ ಇದ್ದಾನೆ. ಅವನ್ನ ನಾವೆಲ್ಲಾ ಕಣ್ಣು ಮುಟ್ಟದ ಡಾಕ್ಟರ್ ಅಂತ್ಲೇ ಕರಿಯೋದು"

"ಕಣ್ಣು ಮುಟ್ಟದ ಡಾಕ್ಟರ್ ! ಹಾಗೆಂದ್ರೇನೋ ?" ಕುತೂಹಲದಿಂದ ಕೇಳಿದೆ.

"ಅದು ಹೀಗೆ ಚಿಕ್ಕಪ್ಪಾ. ಆ ಡಾಕ್ಟ್ರು ಕುಳ್ಳು. ದೊಡ್ಡ ಮೇಜಿನ ಹಿಂದೆ ಕೂತರೆ ತಲೆ ಮಾತ್ರ ಮೇಜಿನ ಮೇಲೆ ಕಾಣಿಸ್ತಿರುತ್ತೆ. ಒಳ್ಳೇ ಬೆಲೆ ಬಾಳೋ ಔಷಧಿ ಪ್ಯಾಕೆಟ್‌ಗಳನ್ನ ಡಜನ್‌ಗಟ್ಟಲೆ ಮೇಜಿನ ಮೇಲಿಟ್ರೂ ಅವನಿಗೆ ತೃಪ್ತಿ ಇಲ್ಲ. ದುರುಗುಟ್ಟಿಕೊಂಡೇ ನೋಡ್ತಿರ್ತಾನೆ ಪೇರಿಸಿರೋ ಬಿಟ್ಟಿ ಔಷಧಿ ಅವನ ಕಣ್ಣು ಮುಟ್ಟಿ ಮುಟ್ಟಿ, ಆ ರಾಶಿ ಹಿಂದೆ ಮರೆಯಾಗ್ತಾ ಇದ್ದಂತೆ, ಹುಂ ಅಂತ ಆರ್ಡರ್ ಕೊಡೋಕ್ಕೆ ಒಪ್ಪಿಗೆ ಕೊಡ್ತಾನೆ. ಭ್ರಷ್ಟಾಚಾರಕ್ಕೂ ಮಿತೀನೇ ಬೇಡ್ವಾ ಚಿಕ್ಕಪ್ಪಾ? ಇದಕ್ಕೆ ಏನು ಮಾಡಬೇಕು ಅಂತೀನಿ ?"

"ಮಾಡೋದೇನೋ, ಕುರ್ಚಿ ಕಾಲನ್ನ ಸ್ವಲ್ಪ ಗಿಡ್ಡ ಮಾಡಿಸಿದ್ರೆ ಆಯ್ತಪ್ಪ !" ಅಂತ ನನ್ನ ಇಂಜಿನಿಯರಿಂಗ್ ಸಲಹೆ ಕೊಟ್ಟು, ಸುಣುಚಿಕೊಂಡೆ.

ಮೂರು ದಶಕಗಳ ಹಿಂದೆ

(ಫೆಬ್ರುವರಿ 1957ರ ಕೊರವಂಜಿಯಿಂದ)

ಕೋಸಿನ ವಾಸನೆ

—ಪಾಟಾಳಿ

ಕೋಸಿನ ಪಲ್ಯ ಮಾಡುತ್ತಾ ಕೂತಿದ್ದೆ, ಅಡಿಗೆ ಮನೆಯಲ್ಲಿ. ಅವಳೆಲ್ಲೋ ಸಮಾಜಕ್ಕೆ ಹೊರಟಿದ್ದಳು.

ನಾವು ವಾಸಿಸುವುದು ಅರೆಮನೆ ! ಅಣ್ಣತಮ್ಮಂದಿರಿಬ್ಬರು ಒಟ್ಟಿಗಿರಲಾರದೆ, ಇಬ್ಭಾಗ ಮಾಡಿ, ವರಾಂಡಾ. ಹಾಲ್, ಊಟದ ಮನೆ ಇತ್ಯಾದಿಗಳನ್ನೆಲ್ಲ ಉದ್ದಕ್ಕೂ ಒಂಬತ್ತಂಗುಲದ ಗೋಡೆಯಿಂದ ಎರಡಾಗಿ ತಯಾರಿಸಿ, ಅತ್ತಲಾಗಿನ ಹಳೆಯ ಬಚ್ಚಲುಮನೆಯನ್ನೇ ಆ ಕಡೆಯ ಅಡಿಗೆಮನೆಯಾಗಿ ಮಾರ್ಪಡಿಸಿ, ಹಿತ್ತಲ ಅರ್ಧಕ್ಕೆ ತಂತಿ ಬೇಲಿ ಕಟ್ಟಿ, ಕೋರ್ಟಿನ ಆಜ್ಞೆ ಪ್ರಕಾರ ವಿಭಕ್ತವಾದ ಮನೆ.

ಆಚೆ ಮನೆಯಲ್ಲಿ ಬಾಡಿಗೆಗಿದ್ದವರಿಗೂ, ನನ್ನ ಹಾಗೆ. ವಿಮಾನ ಕಾರ್ಖಾನೆಯಲ್ಲೇ ಕೆಲಸ. ಭಾನುವಾರ ಬಂತು ಅಂದ್ರೆ. ನನ್ನ ಮನೆಯಲ್ಲಿ ನನ್ನದೇ ಅಡಿಗೆ ಅವರ ಮನೆಯಲ್ಲೂ ಆ ಭಾನುವಾರ, ಅವರದ್ದೇ ಎನ್ನುವುದು ನನಗೆ ಗೊತ್ತಾದದ್ದು ಹೀಗೆ. ...

ಬಾಗಿಲು ಬಡಿದರು, ಬಂದು. ಎದ್ದು ಹೋಗಿ, ಚಿಲಕ ತೆಗೆದು ತಲೆಯನು ಹೊರಕ್ಕೆ ತೂರಿಸಿ ನೋಡುತ್ತೇನೆ, ಶಾಮಣ್ಣ ! "ಏನ್ರಿ ?" ಅಂದೆ, ಮಾಮೂಲಾಗಿ.

"ಕೊಂಚ ಬನ್ರಿ ಅಂದರು. ಹೋದೆ ... ಅವರ ಮನೆಯಲ್ಲೂ ಕೋಸಿನ ಪಲ್ಯವೇ ! "ನೋಡಿ ! ಕೋಸನ್ನ ಕುಯ್ದು ಬೇಯಿಸಿ, ನೀರು ತೆಗೆದು ಬಾಣಲಿಗೆ ಹಾಕಿದೆ...ಯಾಕೋ ಹೊಗೆ ಬರುತ್ತಾ ಇದೆ...ಕರಿದ ವಾಸನೆ ಬರುತ್ತಾ ಇದೆ... ಅಂದರು. "ಅಯ್ಯೋ ! ಮಂಕರೆ ! ಆಕೆ ಬಂದಾಗ ನಿಮ್ಮ ಗತಿ ಏನು ? ಒಲೆ ಹೀಗೆ ಒಂದೇ ಸಮನೆ ಉರಿಯಬಾರದು" ಎನ್ನುತ್ತ, ಆ ಹೊಗೆ ತುಂಬಿದ ಕೋಣೆಯೊಳಕ್ಕೆ ನುಗ್ಗಿ, ಕಣ್ಣುಗಳನ್ನೊರಸುತ್ತ, ತೆವಳಿಕೊಂಡು ಹೋಗಿ, ನಾಲ್ಕೈದು ಸೌದೆಗಳನ್ನ ಒಲೆಯಿಂದೀಚೆಗೆಳೆದೆ. ಬಾಣಲಿಗೆ ಇನ್ನೂ ಒಂದಿಷ್ಟು ಎಣ್ಣೆ ಹಾಕಿಸಿದೆ. ಒಗ್ಗರಣೆ

ಪದಾರ್ಥಗಳನ್ನೆಲ್ಲ ಸೌಟಿಗೆ ಹಾಕಿ ರೆಡಿಮಾಡಿಕೊಳ್ಳಿ...ಕೋಸಿನ ಬಣ್ಣ ಕೆಂಚ ಗಾಗುತ್ತಲೂ, ಬಾಣಲಿಯನ್ನ ಎತ್ತಿ ಕೆಳಗಿರಿಸಿ...ಎಲ್ಲಿ ! ಆ ಕಿಟಕಿ ತೆಗೆಯಿರಿ... ಗಾಳಿ ಬೆಳಕು ಬರಲಿ' ಎಂದೆ.

"ನನಗೆ ಎಟಕುವುದಿಲ್ಲ ಕಿಟಕಿ...ಆಕೆ ಬರಬೇಕು ಅದನ್ನ ತೆಗೆಯಬೇಕಾದರೆ" ಅಂದರು. "ಸರಿ ! ಬಿಡಿ, ನಾನೇ ತೆರೆಯುತ್ತೇನೆ" ಎಂದು ಹೇಳುತ್ತಾ, ನಾನು ಬಾಗಿಲನ್ನು ಒಳಕ್ಕೆ ಎಳೆದೆ. ಅಲ್ಲೇ ಇರಿಸಿದ್ದ ಸಾಸಿವೆ ಡಬ್ಬ ಕೆಳಕ್ಕೆ ಬಿತ್ತು... "ಓ ಇಲ್ಲಿದೆಯೋ ಸಾಸಿವೆ ? ಅಷ್ಟು ಹೊತ್ತಿನಿಂದ ಅದನ್ನೇ ಹುಡುಕುತ್ತ ಇದ್ದೆ" ಎನ್ನುತ್ತ ಆತ ಅದನ್ನ ಆರಿಸಿಕೊಂಡ

ಇನ್ನುಮೇಲೆ, ನೋಡಿ, ಕೋಸನ್ನ ನೀವು ಇನ್ನೂ ಚೂರುಚೂರಾಗಿ ಹೆಚ್ಚ ಬೇಕು...ಎಲೆಗಳೆಲ್ಲ ಹಾಗೆ ಹಾಗೆಯೇ ಇರಿಸಿಬಿಟ್ಟಿದೀರಿ ಏನು ? ಚಾಕು ಪತ್ತೆ ಆಗಿಲ್ಲವೇ ? ನನ್ನನ್ನ ಕೇಳಬೇಕಾಗಿತ್ತು ದಾಕ್ಷಿಣ್ಯವೇನು ಬಂತು? ಆಮೇಲೆ, ಬೆಂದ ಕೋಸನ್ನ. ನೀರಿಂದ ಬಾಣಲಿಗೆ ಎತ್ತಿಹಾಕುವಾಗ, ನೀರನ್ನೆಲ್ಲ ಚೆನ್ನಾಗಿ ಹಿಂಡಿ ಬಿಡಬೇಕು...ಒಲೆ ಅಷ್ಟು ಉರಿಯಬಾರದು...ಉರಿದರೆ, ಎಲೆ ಸೀದು ಹೊಗೆ ಬಂದು ಕರಿದ ವಾಸನೆ ಬರುತ್ತೆ" ಎಂದು ಆತನಿಗೆ ಉಪದೇಶ ಮಾಡಿದೆ...ಆಮೇಲೆ—

ನನ್ನ ಮನೆಗೆ ಬಂದೆ...ನನ್ನ ಬಾಗಿಲು ತೆರೆದಾಗ...ಹೊಗೆ ! ಕರಿದ ವಾಸನೆ ....ಸೀದ ವಾಸನೆ, ನನ್ನ ಕೋಸಿನ ಬಾಣಲಿಯಿಂದ. ಆಕೆ ಬಂದಾಗ, ನನ್ನ ಗತಿ ?



"ಪ್ರಣಯ ಚುಂಬನ, ರತಿ ಕ್ರೀಡೆ, ಸುರತಿ ಮೂರೂ
ತೊಗೊಂಡ್ರೆ, ಒಂದು ಪಾಕೆಟ್ ಭಗವದ್ಗೀತೆ ಫ್ರೀ ಸಾರ್ !"

ಒಂದು ನವ್ಯ ಕಥೆ—೨

—ಶಿಲಾ ಬಾಲಕ

ನನಗೆ ದಿನ ಜೀವನದ ಆಗು ಹೋಗುಗಳ ಭರಾಟೆಯಿಂದ ಬೇಜಾರಾದರೆ, ನಮ್ಮ ನಗರದ ಬಡಾವಣೆಯೊಂದರಲ್ಲಿರುವ ಪಾರ್ಕ್‌ನಲ್ಲಿ ಸುಮಾರು ಎರಡು ಗಂಟೆ ಅಡ್ಡಾಡುತ್ತೇನೆ. ಅದೇ ಪಾರ್ಕಿನ ಮೂಲೆಯಲ್ಲಿ ಒಂದು ಹಳೆಯ ಹುತ್ತವಿದೆ. ಅದರ ಬಳಿ ಭಕ್ತರು ಬಂದು ಪೂಜೆ ಮಾಡಿ ಹೋಗುವುದೂ ಉಂಟು. ಮೊನ್ನೆ ಪಾರ್ಕಿನಲ್ಲಿ ಬೆಂಚಿನ ಮೇಲೆ ಕುಳಿತು ಧ್ಯಾನಮಗ್ನನಾದೆ. ನನ್ನ ಧ್ಯಾನಕ್ಕೆ ಉತ್ತರ ವೆಂಬಂತೆ, ನಾನು ಕಣ್ಣುಬಿಟ್ಟಾಗ, ಪಕ್ಕದಲ್ಲಿ ಯೋಗಿಯೊಬ್ಬ ಕುಳಿತಿದ್ದ! (ಈ ಯೋಗಿಯೇ ನನಗೆ ಹಿಂದೆ ಕಲ್ಲಿನ ರಹಸ್ಯಗಳನ್ನು ಅರಿಯುವ ಮಂತ್ರಿತ ನೀರನ್ನು ಕೊಟ್ಟಿದ್ದು ಅಪರಂಜಿ ಬಳಗದವರಿಗೆ ಗೊತ್ತಿರಬಹುದು ಅಥವಾ ಇಲ್ಲದಿರ ಬಹುದು!) ನನ್ನ ಕಣ್ಣು ಗುಂಡಾಗಿದ್ದನ್ನ ನೋಡಿದ ಯೋಗಿ, "ವತ್ಸ, ನಿನ್ನ ಜೀವನವನ್ನು ಉತ್ಸಾಹಮಯವಾಗಿ ಮಾಡಲು ನನಗೆ ಆಶೆಯಾಗಿದೆ. ಇಗೋ, ಈ ಚಿನ್ನದ ಉಂಗುರವನ್ನು ಧರಿಸು!" ಎಂದು ಒಂದು ಕೆಂಪು ಕಲ್ಲಿದ್ದ ಉಂಗುರ ಕೊಟ್ಟ. Fortunately, ಬೆಳಗಿನ ಜಾವವಾಗಿದ್ದರಿಂದ ಯಾರೂ ಹತ್ತಿರ ಇರ ಲಿಲ್ಲ. ಇಲ್ಲದಿದ್ರೆ ಸಿನಿಮಾ ಶೂಟಿಂಗ್ ನಡೀತಿದೆ ಅಂದುಕೊಂಡು, ನಾಲ್ಕು ಕುಳ್ಳರು, ಮೂರು ವೃದ್ಧರು, ಹತ್ತು ಜನ ಕೆಲಸ ಇಲ್ಲದವರು ಹಾಗೂ ಒಬ್ಬ ಪೋಲೀಸ್ ಹಾಜರಾಗುತ್ತಿದ್ದರು! ಯೋಗಿಗೆ ಧನ್ಯವಾದ ಹೇಳುವಷ್ಟರಲ್ಲಿ ಅವನು ಮಾಯ ವಾಗಿದ್ದ!

*   *

ಮಾರನೆ ದಿನ ಬೆಳಿಗ್ಗೆ ಎದ್ದೆ. "ಏನಾರೂ ತರ್ಕಾರಿ ಬೇಗ ತನ್ನಿ" ಅಂತ ದಕ್ಷಿಣ ದಿಕ್ಕಿನಿಂದ ಆರ್ಡರ್ ತೇಲಿ ಬಂತು. ಸರಿ, ಮಾರ್ಕೆಟ್‌ಗೆ ಹೊರಟೆ. "ಹುರುಳಿ ಕಾಯಿ ಕೊಡಯ್ಯ, ಒಂದು ಕಿಲೋ" ಅಂದೆ. ಅವನು ಕೊಟ್ಟ ತರಕಾರಿ ಪ್ರಮಾಣ ನೋಡಿ, "ಏನಯ್ಯಾ, ಒಂದು ಕಿಲೋ ಕಲ್ಲು ತಾನೇ ?" ಅಂದೆ. ಅಂಗಡಿಯೋನು ನನ್ನ ದುರುಗುಟ್ಟಿ ನೋಡಿದ. ಇನ್ನು ಕೂಗೋಕ್ಕೆ ಶುರುಮಾಡ್ತಾನೆ ಅಂತ ಯೋಚಿ ಸೋದ್ರಲ್ಲಿ, ಅಂಗಡಿಯವನು ವಿನಯದಿಂದ "ಯಾಕೆ ಸ್ವಾಮಿ, ನನ್ನ ಮೇಲೆ ಅನುಮಾನ ಮಾಡ್ತೀರ," ಅಂದ. ಅವನ ವಿನಯ ನೋಡಿ ನನ್ನ ಶಂಕೆ ಬಲವಾಯಿತು. ಅವನ ಒಂದು ಕಿಲೋ ತೂಕದ ಬಟ್ಟನ್ನ ಕೈಗೆ ತೊಗೊಂಡು ನೋಡಿದೆ. ತಕ್ಷಣ

ಅವನು ಭೀತನಾಗಿ, "ಸ್ವಾಮಿ, ನೀವು ಇನ್ಸ್‌ಪೆಕ್ಟರ್ ಅಂತ ಗೊತ್ತಾಯ್ತು; ಏನೋ ದಯವಿಟ್ಟು ನನ್ನ ಕ್ಷಮಿಸಿ ಬಿಡಿ, ಅಂದ. ಒಳಗಿಂದ ಬೇರೊಂದು ಒಂದು ಕಿಲೋ ಕಲ್ಲನ್ನ ತೆಗೆದ. ನನಗೆ ಎಲ್ಲ ಅರ್ಥವಾಯಿತು! "ಇನ್ಮೇಲೆ ಹೀಗೆ ಮಾಡಬೇಡ" ಅಂದು, Extra ಹುರುಳಿಕಾಯಿ ತೆಗೆದುಕೊಂಡು ಮನೆಗೆ ಬಂದೆ ನನ್ನ ಅರ್ಧಾಂಗಿಯ ಮುಖ ಅರಳಿತು. "ಇದೇನ್ರೀ, ಒಂದು ಕಿಲೋಗಿಂತ ಹೆಚ್ಚು ಹುರುಳಿಕಾಯಿ ಇದೆ," ಅಂತ ಆಶ್ಚರ್ಯಪಟ್ಟಳು. ನನ್ನ ರಹಸ್ಯ ಅವಳಿಗೆ ಹೇಳಲಿಲ್ಲ.

ನನ್ನ ಹತ್ತಿರ ಒಂದು ಹಳೆಯ ಸ್ಕೂಟರ್ ಇದೆ. ಅದು ಇನ್ನೂ ಹೇಗೆ ಓಡುತ್ತಿದೆ ಅನ್ನೋದು ಸಂಶೋಧನೆಗೆ ಒಳಪಡಬಹುದಾದ ಸಂಗತಿ! ಈ ಸ್ಕೂಟರ್‌ಗೆ Tax token ತೆಗೆದುಕೊಳ್ಳಲು RTO ಆಫೀಸ್‌ಗೆ ಹೋದೆ. ಒಂದು ಗಂಟೆ ಕಾದ ಮೇಲೆ ನನ್ನ ಸರದಿ ಬಂತು. ಆಫೀಸರ್ ಹತ್ತಿರ ಕೂತೆ. ನನ್ನ Tax token ಹರಿದು ಹೋಗಿತ್ತು. ಅದನ್ನ ನೋಡಿ, ಆ ಅಧಿಕಾರಿ, "ಇದೇನ್ರೀ ಇದು, ರುಪಾಯಿ ನೋಟಾಗಿದ್ರೆ ಹೀಗೆ ಹರೀತಿದ್ರ ?" ಅಂತ ರುದ್ರನಾದ. ನಾನು ನನ್ನ (ಸ್ವಭಾವ ಸಹಜವಾದ) ನಮ್ರತೆಯಿಂದ ದೂರವಾಗದೆ, "ಮನೇಲಿ ಮಗು......" ಅಂತ ತೊದಲಿದೆ. ಆ ಕ್ಷಣದಲ್ಲೇ ಅಧಿಕಾರಿಯ ಕಣ್ಣು ನನ್ನ ಉಂಗುರದ ಮೇಲೆ ಬಿತ್ತು. (ಬಿದ್ದವು!) ಏನು ಮಾಯವೋ, ಅವನ ಮುಖ ಬಿಳಿಚಿಕೊಂಡಿತು! ಧ್ವನಿ ಕುಂಠಿತವಾಯ್ತು! "ಸಾರಿ ಸಾರ್, ನೀವು ಯಾರು ಅಂತ ಗೊತ್ತಾಗಲಿಲ್ಲ!" ಅಂತ ಪೇಚಾಡಿದ. "ಲೋ, ಏನ್ರೋ ನೋಡ್ತಿದೀರಾ, ಸಾಹೇಬರಿಗೆ ಕಾಫಿ ತನ್ರೋ," ಅಂತ ಸಿಬ್ಬಂದಿಗಳಿಗೆ ಕಠೋರವಾಗಿ ಆಣತಿ ಇಟ್ಟ. ಕಾಫಿ ಆಗುವಷ್ಟರಲ್ಲಿ ನನ್ನ Token (ಹೊಸದು) ತಯಾರಾಗಿತ್ತು! ಮನೆಗ ಬಂದೆ—ನಾನು RTO ಗೆ ಹೋಗ್ತೀನಿ ಅಂದಾಗ, ಈ ಪ್ರಾಣಿ ಇನ್ನು ಸಾಯಂಕಾಲದವರೆಗೂ ಬರಲ್ಲ ಅಂತ ತಿಳಿದಿದ್ದ ಸಹಧರ್ಮಿಣಿಗೆ ಆಶ್ಚರ್ಯ! "ಇದೇನ್ರೀ" ಅಂತ ಅವಳ ಕಣ್ಣಾಲಿಗಳು ಸೋಜಿಗಪಟ್ಟವು. "ನನಗೆ RTO ನಲ್ಲಿ Influence ಇದೆ" ಅಂತ ಮುಗುಮ್ಮಾಗಿ ಹೇಳಿದೆ!

ನನ್ನ ಅಣ್ಣನ ಮಗನಿಗೆ ನರ್ಸರಿ ಸ್ಕೂಲಲ್ಲಿ ಸೀಟಿಗೆ ತಕರಾರು. ಬೆಂಗಳೂರಲ್ಲಿ ಸ್ಕೂಲ್ ಸೀಟು ಸಿಗೋದಕ್ಕೆ ಭಗೀರಥ ಯತ್ನ ಕೂಡ ಸಾಲದು. "ನೀನಾದರೂ ನೋಡೋ, ಸ್ಕೂಲುಗಳಲ್ಲೆಲ್ಲ ಸುತ್ತಿ ಸಾಕಾಗಿದೆ," ಅಂತ ನನ್ನಣ್ಣ ಕೇಳಿದ. ಇರಲಿ, ಪ್ರಯತ್ನಿಸೋಣ ಎಂದು ಕಾನ್ವೆಂಟ್ ಸ್ಕೂಲಿಗೆ ಹೆಜ್ಜೆ ಹಾಕಿದೆ. ಅಲ್ಲಿ ಪ್ರಿನ್ಸಿಪಾಲರ ಕೊಠಡಿಯ ಮುಂದೆ ಒಂದು ಗಂಟೆ ಕಾದೆ. ರೂಮಿನೊಳಕ್ಕೆ ಪ್ರವೇಶ ಸಿಕ್ಕಿದಾಗ ಪ್ರಿನ್ಸಿಪಾಲರು ಸಹನೆ ಕಳೆದುಕೊಂಡಂತಿತ್ತು. "ನೋಡ್ರೀ, ಸೀಟು ಮರದಲ್ಲಿ ಬಿಡೋ ವಸ್ತು ಅಲ್ಲ, ನಿಮಗೆ ನಿಜ ಹೇಳ್ತೀನಿ. ಸ್ಕೂಲಿನ ಬಿಲ್ಡಿಂಗ್ ಫಂಡಿಗೆ ಐದು

ಸಾವಿರ ಕೊಟ್ರೆ ಏನೋ ಒಂದು ಚಾನ್ಸ್ ನೋಡೋಣ, ಇಲ್ದಿದ್ರೆ ನೀವು ಬಂದ ದಾರಿ...... ಅವರು ಮಾತು ಮುಗಿಸುವ ಮುನ್ನವೇ ನಾನು ಎದ್ದು ನಿಂತೆ. ಆಕಸ್ಮಾತ್ ಅವರ ಕಣ್ಣಿಗೆ ನನ್ನ ಉಂಗುರ ಕಾಣಿಸ್ತು. ಅವರ ಬಣ್ಣ ಹಠಾತ್ ಬದಲಾಯಿತು. ನನ್ನ ಪ್ರತ್ಯೇಕವಾಗಿ ಒಂದು ಒಳ ಕೋಣೆಗೆ ಕರೆದುಕೊಂಡು, ಕೇಕ್ ಕೊಡಿಸಿದರು. "ಕ್ಷಮಿಸ್ಸಿ, ನಿಮ್ಮ ಮನೆ ಮಗು ಅಂಥ ಚೂಟಿ ಹುಡುಗಂಗೆ ಸೀಟಿಲ್ಲ ಅನ್ನೋಕಾಗುತ್ಯೆ ? ನಾಳೇನೇ ಬನ್ನಿ" ಅಂತ ಅಂಗಲಾಚಿದರು. ನಮ್ಮಣ್ಣನಿಗಂತೂ ಸ್ವರ್ಗ ಮೂರೇ ಗೇಣು !

* * *

ಈ ಉಂಗುರ ನನ್ನ ಹತ್ತಿರ ಇರೋದ್ರಿಂದ ಈ ಅನುಕೂಲಗಳು ಅಂತ ನನ್ನ ಮಂದ ಮತಿಗೂ ಗೊತ್ತಾಗಿತ್ತು. ಇನ್ನೂ ಏನೇನು ತಮಾಷೆ ನೋಡಬಹುದು! ಎಂ ಎಲ್.ಎ.ಗಳು, ಬಿ.ಡಿ.ಎ. ಅಧಿಕಾರಿಗಳು, ಮಂತ್ರಿಗಳು ಎಲ್ಲರ ಹತ್ತಿರಾನೂ ಒಂದು ಕೈ ನೋಡೋಣ ಅಂತ ಯೋಚಿಸಿದೆ. ನನ್ನ ಭವಿಷ್ಯದ ಕನಸನ್ನೆಲ್ಲ ಕಾಣುತ್ತ ಪಾರ್ಕಿನ ಕೊಳದ ಹತ್ತಿರ ನಿಂತಿದ್ದೆ. ಕೈಮೇಲೆ ಏನೋ ಕೀಟ ಬಿದ್ದಂತಾಯಿತು. ಕೈ ಒದರಿದೆ—ಉಂಗುರ ಕೊಳದೊಳಕ್ಕೆ ಬಿದ್ದು ಹೋಯ್ತು. ಪ್ರಾಯಶಃ ಆ ಯೋಗೀನೇ ಕೀಟದ ರೂಪದಲ್ಲಿ ಬಂದಿದ್ನೇನೋ ?

(ಸಂಪಾದಕರೆ,

ನಾನು ಹರಿಶ್ಚಂದ್ರನ ಮನೆತನದವನಾದ್ದರಿಂದ ಸತ್ಯವನ್ನು ಬಿಡುವಂತಿಲ್ಲ ಎಂದು ಸೂಚಿಸಬಯಸುತ್ತೇನೆ. ಶಿ. ಬಾ.)

ಅಭಿನಂದನೆ (ಉಪಚಾರೋಕ್ತಿ)

ಹೆಚ್ಚಿನ ಕಲ್ಪನೆಯಿಂದ ಸುತ್ತುವರೆದ ಸ್ವಲ್ಪ ಪ್ರೇಮದ
ಸ್ಪರ್ಶ ಇರುವ ಉಕ್ತಿ.

—ಎಮಿಲಿ ಫಾಗೆಟ್

ಆಶಾವಾದಿ, ನಿರಾಶಾವಾದಿ ಮತ್ತು ಬುದ್ಧಿವಂತ :

ಎಲ್ಲೆಡೆ ಹಸಿರು ದೀಪ ಕಾಣುವವ ಆಶಾವಾದಿ.
ಎಲ್ಲೆಡೆ ಕೆಂಪು ದೀಪ ಕಾಣುವವ ನಿರಾಶಾವಾದಿ.
ಆದರೆ ನಿಜಕ್ಕೂ ಬುದ್ಧಿವಂತನಾದವ
ಬಣ್ಣಗುರುಡ !

—ಡಾ॥ ಆಲ್ಬರ್ಟ್ ಸ್ವೀಜರ್

ಈಗ ಎಷ್ಟೋ ವಾಸಿ

—ಲೀಲಾ ಮಿರ್ಲೆ

"ಚೆನ್ನಾಗಿದೀರಾ ?"

"ಏನೋಮ್ಮ, ಇಷ್ಟರ ಮಟ್ಟಿಗೆ."

"ಹೋದ ಸಲ ನೋಡಿದಾಗ ತುಂಬ ಇಳಿದು ಹೋಗಿದ್ದಿರಿ. ಈಗ ಪರವಾಗಿಲ್ಲ. ಎಷ್ಟೋ ಆರೋಗ್ಯವಾಗಿ ಕಾಣ್ತೀರ."

"ಹೌದು, ಆಗ ಕೆಲಸದವರ ತಾಪತ್ರಯ ಇತ್ತು. ಎರಡು ತಿಂಗಳಲ್ಲಿ ಎಂಟು ಜನ ಬಂದು ಹೋದರು. ಅವರ ಕಾಟದಲ್ಲಿ ಹಾಗಾಗಿದ್ದೆ.

"ಹಾಗಾದ್ರೆ ಈಗ ಸರಿಯಾದೋಳು ಸಿಕ್ಕಿರಬೇಕು."

"ಹೌದಮ್ಮ."

"ಏನು ಬರಿ ಪಾತ್ರೆ, ಬಟ್ಟೆ, ಕಸ ಗುಡಿಸೋದಾ ?"

"ಇಲ್ಲ, ಅಡಿಗೆ ಮನೆ ಕೆಲಸಾನೂ."

"ಸುತ್ತು ಕೆಲಸಾನಾ ?"

"ಇಲ್ಲಾ, ಅಡಿಗೆ ಮಾಡೋದು, ಇವರಿಗೆ, ಮಕ್ಕಳಿಗೆ ಡಬ್ಬ ಪ್ಯಾಕ್ ಮಾಡೋದು ಪ್ರಕಾಶನ್ನ ಶಾಲೆಗೆ ಬಿಟ್ಟು ಬರೋದು ; ಗಿಡಕ್ಕೆ ನೀರು ಹಾಕೋದು ಅಂಗಡಿಯಿಂದ ಸಾಮಾನು ತರೋದು ... ."

"ಏನಾಶ್ಚರ್ಯ, ಅದೆಲ್ಲಾ ಮಾಡ್ತಾಳೆಯೇ ?"

"ಅಷ್ಟೇ ಅಲ್ಲಾ. ಫ್ರಿಜ್ ಕ್ಲೀನ್ ಮಾಡೋದು, ಬಾತ್‌ರೂಂ ತೊಳೆಯೋದು. ಬಟ್ಟೆ ಇಸ್ತ್ರಿ ಮಾಡೋದು, ಎಲ್ಲಾ ಅವಳದ್ದೇ."

"ಊಟ, ತಿಂಡಿ ಎಲ್ಲಾ ನಿಮ್ಮನೇಲೇ ಇರಬೇಕು"

"ಹೌದಪ್ಪಾದು, ಊಟ, ತಿಂಡಿ, ಬಟ್ಟೆಬರೆ ಎಲ್ಲಾ ಸಿಗತ್ತೆ."

"ಸಂಬಳ ತುಂಬ ಇರಬೇಕು. ಎಷ್ಟು ಕೊಡ್ತೀರಿ ?"

"ಸಂಬಳ..........ಇಲ್ಲ, ಖರ್ಚಿಗೆಲ್ಲಾ ಹಣ ಸಿಗುತ್ತೆ. ಸಂಬಳಾಂತ ಹ್ಯಾಗ್ ತೆಗೊಳ್ಳಿ ನಾನು ?"



"ಇದ್ದಕ್ಕಿದ್ದ ಹಾಗೆ ಸಂಧ್ಯಾಗೆ ಕ್ರಿಕೆಟ್ ಹುಚ್ಚು ಯಾಕೆ ಅಂದ್ರಾ ?
ಹುಚ್ಚೇನೂ ಇಲ್ಲಾರೀ, ಇಮ್ರಾನ್ ಖಾನ್ ನೋಡುಕ್ಕೆ ಹೋಗ್ತಿದಾಳೆ !"

ಯಾತ್ರಿಕರ ಪತ್ರ

—ಕೇಘ

ಅಲ್ಲಾಪುರ–೩

[ಇದುವರೆವಿಗೂ:- "ಹೋಗಲಿ ಸ್ವಾಮಿ, ಮಹಾತ್ಮಾಗಾಂಧಿಯವರಿಗಾದೂ, ಮೌನ ಆಚರಿಸಬಹುದಲ್ಲಾ?" ಅಂದ ಚಂದಿ.]

ಈ ಪ್ರಶ್ನೆಯನ್ನು ಕೇಳಿ ಕಂಬಯ್ಯ ಅವಾಕ್ಕಾದರು. ಚಂದಿಯ ಮುಖವನ್ನೇ ದೃಷ್ಟಿಸಿ ದೃಷ್ಟಿಸುತ್ತಾ ಅವರ ಮುಖ ಕೆಂಪೇರಿ ಉದಿಕೊಂಡಿತು. ಇನ್ನೇನು ಅವರ ಮುಖ ಬಿರುಕು ಬಿಡುತ್ತೇಂತ ಅಂದುಕೊಳ್ಳೋ ಹೊತ್ತಿಗೆ-

"ಏನಂದ್ರಿ ?" ಅಂತ ಕೇಳಿದರು.

ರಾಜ-ನಾನು ಚಂದಿಯ ಮುಖ ನೋಡಿದೆವು. ಅವನ ಮುಖ ಈಗ ಒಡೆಯುವಂತೆ ಊದಿಕೊಂಡಿತ್ತು.

"ಮಹಾತ್ಮಾಗಾಂಧಿಯವರಿಗಾದ್ರೂ ಮೌನ ಆಚರಿಸಬಹುದಲ್ಲಂತ ನನ್ನ ಸ್ನೇಹಿತ ಹೇಳಿದ." ಅಂತ ವಿವರಿಸಿದ ರಾಜ.

"ಸ್ವಾಮಿ, ಮಹಾತ್ಮಾಗಾಂಧಿ, ಇಂದ್ರಾಗಾಂಧಿಯವರ ಮಾವ ಅಂತ ಎಷ್ಟು ಜನ ತಿಳ್ಕೊಂಡಿದ್ದಾರೆ ಹೇಳಿ ? ನಿಮಗೂ ನಂಗೂ ಗೊತ್ತು. ಈ ಮುಂಕುಗಳಿಗೆ ಹೇಳಿ ಏನು ಪ್ರಯೋಜನ ? ನಮ್ಮ ಊರಿನ ಅರ್ಧ ಧ್ವಜ ಕಾಡಪ್ಪನ ಸ್ವಂತದ್ದು. ಈ ಪಂಚಾಯ್ತಿ ನಡೀತಿರೋ ಮನೆ, ಮೊದ್ಲು ಈ ಮಂಜಯ್ಯನ ತಾತಂದು. ಅವರಿಂದ ಗುತ್ಯಮ್ಮ ಅನ್ನೋ ಹೆಂಗಸಿಗೆ ಬಂತು. ಅವಳಿಂದ ಈ ಕಾಡಪ್ಪನ ಅಪ್ಪ ಲಪಟಾಯಿಸಿದ. ಮನೆ- ಫ್ಲಾಗು ಎರಡೂ ಅವನದೇ ಆಗಿದೆ ಸ್ವಾಮಿ- ಕಾಡಪ್ಪಂದು ! ಅದಕ್ಕೇ ಅವನು ತಾನು ನಿಷ್ಪಕ್ಷಪಾತಿ ಅಂತ ತೋರಿಸ್ಕೊಳ್ಳೋಕೆ ಬ್ರಾಂಬ್ರಿಗೂ ಹರಿಜನರಿಗೂ ಇಬ್ರಿಗೂ ಮೌನ ಆಚರಿಸ್ಬೇಕೂಂತ ರೂಲ್ ಮಾಡಿದ್ದಾನೆ" ಅಂದ್ರು ಕಂಬಯ್ಯ.

"ಬ್ರಾಂಬ್ರು ಅಂದ್ರೆ ಯಾರಯ್ಯಾ" ಅಂತ ಚಂದಿ ಪಿಸು ಮಾತಿನಲ್ಲಿ ಕೇಳಿದ-ಸದ್ಯ.

ರಾಜನ ಮುಖ ಬಿರುಕು ಬಿಡುವಂತೆ ಊದಿಕೊಂಡಿತ್ತು.

"ಗಾಂಧಿ" ಅಂದ–ಪಿಸುಮಾತಿನಲ್ಲೇ.

ಧ್ವಜದ ವಿಷಯ ಮುಕ್ತಾಯ ಮಾಡಿದೆವು.

ಅಲ್ಕಾಪುರದ ಪಂಚಾಯ್ತಿ ಮುಂಗಡ ಪತ್ರಾನ (ಬಡ್ಜೆಟ್) ಸದಸ್ಯ ಹೊನ್ನಯ್ಯ ಸಭೆಯ ಮುಂದಿಟ್ಟ. ತಾಲ್ಲೂಕು ಬೋರ್ಡು, ಜಿಲ್ಲಾ ಬೋರ್ಡು–ಮನೆ ಕಂದಾಯ ಇವುಗಳಿಂದ ಬಂದ ಹಣದಲ್ಲಿ ಅಲ್ಕಾಪುರದ ಪಂಚಾಯ್ತಿ ಖರ್ಚು ತೂಗಿಸೋಕಾಗೊಲ್ಲ-ಅಂತ ಅಂಕಿ ಅಂಶಗಳಿಂದ ಸಾಬೀತು ಪಡಿಸಿ, "ಈ ಬಾರಿ ಹೊಸ ತಲೆ ಕಂದಾಯ ಹಾಕ್ಲೇ ಬೇಕು" ಅಂದ.

"ನಮ್ಮೂರಿಗೆ ಜಾಡಮಾಲಿಗಳೇಕೆ ? ಪ್ರತಿಯೊಬ್ರೂ ಅವರವರ ಮನೆ ಮುಂದೆ ಕಿಲೀನ್ ಮಾಡ್ಕಳ್ಳಿ-ರಸ್ಯಾದಲ್ಲಿ ಅಂಗೇ ಮಾಡ್ಕೊಂತಾರೆ" ಅಂದ ಒಬ್ಬ.

"ಅವನು ಹೊನ್ನಯ್ಯನ ಭಾವಮೈದ ಸೋಮಣ್ಣ ಮಾರಡೀಯಿಂದ ಬಂದಿದ್ದಾನೆ–ಅಲಾಸ್ಕಾದಿಂದ ಬಂದಿದ್ದೀನೆ ಅಂತ ತಿಳ್ಕೊಂಡಿದ್ದಾನೆ-ಮುಟ್ಠಾಳ" ಅಂದರು ಕಂಬಯ್ಯ.

"ರಸ್ಯಾಂದ್ರೆ–ಎಲ್ಲೈತದು ? ಕಸಾನೆಲ್ಲಾ ಏನ್ಮಾಡ್ತಾರೆ ?" ಕಾಡಪ್ಪ ಕೇಳಿದರು.

"ರಸ್ಯಾಂದ್ರೆ ಯೂರೋಪ್‌ನಾಗೈತೆ. ಅಲ್ಲೀ ರಾಜರು ಬಂದೋದ್ರಲ್ಲಾ ಈಗ್ಗಾನೆ–ಗರೀಬ್‌ಚೋಫ್ ಅಂತ."

"ವೋ ಅವ್ರಾ ? ನಮ್ಮ ದೇಸದೋನೊಬ್ಬರನ್ನ ಚಂದ್ರನತ್ರಕ್ಕೆ ಕರ್ಕೊಂಡೋಗಿದ್ರಲ್ಲ–ಅವರೇನಾ ?"

"ಅವರೇ. ಅವರ ದೇಸದಲ್ಲಿ ಅವರವರ ಕಸಾನ ಅವರವರೇ ಎತ್ತಾಕ್ಬೇಕು.

ಅದ್ಕೇ ಕಮ್ಯೂನಿಷ್ಟೂಂತ ಹೆಸ್ರು–ನಮ್ಮ ದೇಸದಲ್ಲೂ ಅಂಗೇ ಬರ್ಬೇಕು. ಅಂದ.

ಅಧ್ಯಕ್ಷ ಕಾಡಪ್ಪ ಮೇಜನ್ನು ಗುದ್ದಿದರು.

"ಆ ತರಾ ಆಗಾಕೆ ನನ್ನ ರಕ್ತಾ ಇರೋಗಂಟಾ ಬಿಡಾಕಿಲ್ಲ. ಅದ್ಕೆಲ್ಲಾ ತುಂಬಾ ಕ್ರಾಂತಿ ಆಗ್ಬೇಕು. ನಮ್ಮ ಕ್ಯಾತೇದೇವರ ಜಾತ್ರೇನೆಲ್ಲಾ ನಿಲ್ಲಿಸಿ ಬಿಡೀಂತ ಕೂಡ ಯೇಳ್ತೀರಿ ನಾಳೆ-ನಿಂಗೇನೂ ತಿಳ್ಯಾಕಿಲ್ಲ-ನೀಯಿನ್ನೂ ವುಡುಗಾ-ಬಾಯ್ಮುಚ್ಕೊಂಡು ಕುಂತಿರು!" ಅಂದರು.

ಸೋಮಣ್ಣ ಬಾಯ್ಮುಚ್ಕೊಂಡು ಕುಂತ.

"ಮತ್ತೀಗ ನಮ್ಮ ಖೋತಾನಂಗೆ ತುಂಬ್ತೀರಾ?"—ಹೊನ್ನಯ್ಯ ಸವಾಲ್ ಹಾಕಿದ.

ಒಬ್ಬ ಕೈಯೆತ್ತಿದ.

"ಕಮ್ಮಾರ ಚೆಂಡಿಯಪ್ಪ"—ಅಂತ ಪರಿಚಯಿಸಿದರು ಕಂಬಯ್ಯ.

"ಏನೋ ಚಂಡ್ಯ?" ಕಾಡಪ್ಪ ಕೇಳಿದರು.

"ಈ ಊರಿಗೆ ಬರೋ ಕಾಗ್ದಗಳು ಅವೆಯಲ್ಲಾ ಅವುಕ್ಕೆಲ್ಲಾ ಅಣಾ ಯಾಕೆ ವಸೂಲ್ ಮಾಡ್ತಾರ್ದು?" ಅಂತ ಚಂಡ್ಯ ಕೇಳಿದ.

"ಅಂದರೆ......?"

"ಚೆಂಡ್ಯ ಹೇಳೋದು–ಪ್ರತಿ ಅಂಚೆ ಸಾಮಾನು ಮೇಲೂ—ಅಂದ್ರೆ ನಮ್ಮೂರಿ ನೋರಿಗೆ ಬರೋ ಅಂಚೆ—— ಅಲ್ವೇನೋ ಚೆಂಡ್ಯ?" —ಹೊನ್ನಯ್ಯ ಶುರು ಮಾಡಿದ.

"ಔದ್ರು" ತಲೆಯಾಡಿಸಿದ ಚೆಂಡ್ಯ.

"ಅವುಗಳ ಮೇಲೆ ನಾವು ಕಂದಾಯ ವಸೂಲು ಮಾಡೋಣ... ಅಲ್ವೇನೋ ಚೆಂಡ್ಯ?"

"ಔವ್ರು" ಅಂದ ಚೇಂಡ್ಯ.

ಕಂಬಯ್ಯ ಎದ್ದು ನಿಂತರು.

"ಅಧೆಂಗಾಗ್ತದೆ ? ನನಗೆ ಬರೋವೆಲ್ಲಾ ಸ್ಕೂಲು ಇನ್ಸ್‌ಪೆಕ್ಟರ್ ಆಫೀಸಿಂದ-ಟಪಾಲು. ನಾನ್ಯಾಕೆ ಅದಕ್ಕೆ ಕಂದಾಯ ಕಟ್ಟಬೇಕು ?" ಅಂತ ಕೇಳಿದರು.

ಕಂಬಯ್ಯನ ಮಾತು ಯಾರ ಕಿವೀಗೂ ಬಿದ್ದಿರಲಾರದು. ಅವರು ಪಂಚಾಯ್ತಿ ಸದಸ್ಯರಾಗಿರಲಿಲ್ಲ.

"ಪ್ರತಿದಿನ ಅಲ್ಕಾಪುರದ ಪ್ರಜೆಗಳು ತಲಾ ಹತ್ತು ಪೈಸೆ ಕೊಡ್ಬೇಕೂಂತ ರೂಲಿಸ್ ಮಾಡಾನ" ಅಂದ ಕೂರ್ಮಯ್ಯ ಹೆಸರಿನ ಸದಸ್ಯ.

"ಯಾಕೇಂತ ಕೇಳಿದರೆ ಜನ ?" ಅಧ್ಯಕ್ಷರ ಪ್ರಶ್ನೆ.

"ನೀವು ಸೇವ್ನೇ ಮಾಡೋ ಗಾಳೀಗೆ ಅಂತಯೇಳೋಣ"–ಅಂದ.

"ಜನ ಸುಮ್ನಿರ್ತಾರಾ ?"

"ಏನ್ಮಾಡ್ತಾರೆ ? ಉಸಿರಿಡ್ಕೊಂಡು ಸಾಯ್ತಾರಾ ?"

ಇದಕ್ಕೆ ಕಾಡಪ್ಪನ ಉತ್ತರವಿರಲಿಲ್ಲ. ಯಾರಲ್ಲೂ ಉತ್ತರವಿರಲಿಲ್ಲ. ರಾಜ ಚಂದಿ ನಾನು ಎದ್ದೆವು. ಕಂಬಯ್ಯನವರಿಗೆ ಸಂಜ್ಞೆಮಾಡಿ ಹೊರ ಬಂದೆವು.

"ಲೋ, ದಮ್ಮಯ್ಯ ಕಾಣೋ–ಈ ವರದೀನ ಸಂಪಾದಕರಿಗೆ ಕಳಿಸ್ಬೇಡ" ಅಂದ ಚಂದಿ.

"ಯಾಕಯ್ಯಾ ?" ಅಂತ ಕೇಳಿದೆ.

"ಈ ಪೋಸ್ಟ್ ಪಡಕೊಳ್ಳೋಕೆ ಟ್ಯಾಕ್ಸು—ಘಾಳಿ ಪಡಕೊಳ್ಳೋಕೆ ಟ್ಯಾಕ್ಸು ಗಳಂಥಾ ಚಿನ್ನದ ಮೊಟ್ಟೆಗಳನ್ನ ಕಂಡುಕೊಂಡು ಬಿಟ್ರೆ, ನಮ್ಮ ವಿ.ಪಿ. ಸಿಂಗ್ ಸುಮ್ನಿರ್ತಾನೇನಯ್ಯ ?"

ನಾನು ಯೋಚಿಸಿದೆ. ಚಂದಿ ಮಾತಿನಲ್ಲಿ ಒಂಥರಾ ಟ್ರೂತಿತ್ತು. ದಾರೀಲಿ ಹೋಗೋ ಮಾರಮ್ಮ......ಕ್ಷಮ್ಸಿ—ಗಾದೆ ಬರೆಯೋಕೆ ಶುರು ಮಾಡಿದ್ದೆ-ನನ್ನ ಸ್ನೇಹಿತನ ತಲೇಲಿ ಏನಿತ್ತೂಂದ್ರೆ—ನಮ್ಮ ಹಣಕಾಸಿನ ಸಚಿವರುಗಳಿಗೆ ನಾವಾಗೆ ಹೊಸಾ ಐಡಿಯಾಗಳನ್ನ ಯಾಕೆ ಕೊಡೋಣಾಂತ-ಅಷ್ಟೆ. ಅವರು ಪಡೆಯೋ ಸಂಬಳಕ್ಕೆ ಅವರೇ ಯೋಚಿಸಲಿ! ಆದ್ರೂ ಕೂಡ-ಅಲ್ಕಾಪುರದಂತಹ ಗೊಡ್ಡು ಹಳ್ಳೀಲಿ ಕೂಡ, ಬ್ಯಾಂಕರ್ ಮಾರ್ಗಯ್ಯನಂಥಾ ಫೈನಾನ್ಷಿಯಲ್ ವಿಜರ್ಡ್‌ನ ಮೀರಿಸೋ ವ್ಯಕ್ತಿಗಳಿದ್ದಾರಲ್ಲಾಂತ ಮನದಟ್ಟಾಯ್ತು. ಯಾವ ಹುತ್ತದಲ್ಲಿ ಯಾವ.. ಕ್ಷಮ್ಸಿ.

ಅಲ್ಕಾಪುರ ಬಿಡುವಾಗ ಊರು ಮುಂದಿನ ಕಲ್ಲಿನ ಮೇಲಿದ್ದ ಹೆಸರಿನ "ಅ" ಅಕ್ಷರಾನ ಹೊಡೆದು ಹಾಕಿ- "ಹ" ಅಂತ ಬರೆದ ರಾಜ. ಚಂದಿ–"ಹ"ನ ಹೊಡೆದು ಹಾಕಿ "ಶು" ಅಂತ ಬರೆದ. ಕಂಬಯ್ಯನೋರಿಂದ ಸೀಮೆಸುಣ್ಣ ತಕೊಂಡಿದ್ರು.

"ಸ್ಪ್ಲೆಂಡಿಡ್ ! "ಅಂದ ರಾಜ.

"ಆಮೆನ್" ಅಂದೆ ನಾನು.

[ಸಂ. ಅವರಿಗೆ: ಈ ಪತ್ರ ವಿ.ಪಿ.ಸಿಂ. ಅವರ ಕೈಗೆ ಸಿಕ್ಕಿ ಅವರಿಗೆ ಹೊಸಾ ಕಂದಾಯ ದಾರಿ ಕಾಣುತ್ತೆ ಎನ್ನುವ ಗುಮಾನಿ ನಿಮಗೆ ಬಂದರೆ-ಪತ್ರವನ್ನು ಯಥೋಚಿತ ಉಪಯೋಗಿಸಿ—ಕೇ.]

"ಸ್ಥಿತಪ್ರಜ್ಞಸ್ಯ ಕಾ ಭಾಷಾ ?"

—ಮಲ್ಲಿಕಾರ್ಜುನ ಪರಡ್ಡಿ

ನಮ್ಮ ಶಾಲಾ ಕಾಲೇಜುಗಳಲ್ಲಿಯ ಪ್ರಾಧ್ಯಾಪಕರನೇಕರು (ವಿದ್ಯಾರ್ಥಿಗಳ ಬಗ್ಗೆ ಹೇಳುವುದೇ ಬೇಡ !) "ಸ್ಥಿತಪ್ರಜ್ಞನ ಭಾಷೆ ಯಾವುದು ?" ಎಂದು ಅನವಾದಿಸಿ ತಮ್ಮ ಭಾಷಾ ಪ್ರೌಢಿಮೆಯನ್ನು ವ್ಯಕ್ತಗೊಳಿಸುತ್ತಾರೆ. ಸಂಸ್ಕೃತ ದೇವಭಾಷೆಯಾಗಿರುವಂತೆ ಸ್ಥಿತಪ್ರಜ್ಞರಿಗೂ ಒಂದು ಭಾಷೆ ಬೇಕೇ ಬೇಕೆಂಬ ಅವರ ವಾದ ತರ್ಕಬದ್ಧ, ನ್ಯಾಯ ಸಮ್ಮತ. ರಾಷ್ಟ್ರ ಭಾಷೆ ಎಂದು ಅರ್ಧ ಶತಮಾನದಿಂದಲೇ ಘೋಷಿಸಲ್ಪಟ್ಟ, ಅಧ ಯನ ಮಾಡದಿದ್ದರೂ ಕಡ್ಡಾಯ ಭಾಷೆಯಾಗಿರುವ ಹಿಂದಿಯನ್ನು ಬಲ್ಲವರು 'ಕೀ ಭಾಷಾ' ಎಂದೇ ತಿದ್ದಿಯಾರು. ಏಕೆಂದರೆ ಹಿಂದಿಯಲ್ಲಿ 'ಭಾಷಾ' ಶಬ್ದ ಸ್ತ್ರೀಲಿಂಗದಲ್ಲಿದ್ದು, 'ಕಾ,ಕೇ,ಕೀ' ನಿಯಮವನ್ನು ಅರಿಯುವುದೇ ಒಹು ಪ್ರಯಾಸವಾಗುತ್ತದೆ. ಹಿಂದಿಯಿರಲಿ, ಸಂಸ್ಕೃತವಿರಲಿ ಸ್ಥಿತಪ್ರಜ್ಞನ ಭಾಷೆ ಯಾವುದೆಂಬ ಜಿಜ್ಞಾಸೆಯಂತೂ ಇದ್ದೇ ಇದೆ. ಭಾಷಾವಾರು ಪ್ರಾಂತಗಳ ರಚನೆಯಾದ ಮೇಲಂತೂ ಭಾಷೆಯ ಮಹತ್ವ ಅತಿಯಾಗಿ, ಅನಿವಾರ್ಯವಾಗಿ ನಮಗೆ ಅರಿವಾಗುತ್ತಿದೆ. ಭಾಷಾ ರಾಜಕೀಯವಂತೂ ಬಲು ಲಾಭದಾಯಕವಾಗಿದೆ.

ತಮ್ಮ ಮಕ್ಕಳನ್ನು 'ಕಾನ್ವೆಂಟ್' (ಇಂಗ್ಲೀಷ್ ಮಾಧ್ಯಮದ) ಶಾಲೆಗಳಿಗೆಕಳಿಸಿದರೂ, ಪರೋಪಕಾರ ಬುದ್ಧಿಯಿಂದ ನಮ್ಮ ಕನ್ನಡ ಭಾಷಾಭಿಮಾನಿಗಳು ಕನ್ನಡಕ್ಕಾಗಿ, ಕನ್ನಡ ಕಡ್ಡಾಯವಾಗಲೆಂದು ಆಗ್ರಹಪೂರ್ವಕವಾಗಿ ಹೋರಾಡುತ್ತಿದ್ದಾರೆ. ಕನ್ನಡಮ್ಮನ ಕಣ್ಮಣಿಗಳಾಗಿ ಪೇಪರುಗಳಲ್ಲಿ ಅವರ ಹೆಸರುಗಳು ದಿನಾಲೂ ರಾರಾಜಿಸುತ್ತವೆ. ಅಷ್ಟೇ ಅಲ್ಲ, ಈ ನೆಪದಲ್ಲಿ ಇತರೇ ಅನೇಕ ಸೌಲಭ್ಯಗಳನ್ನೂ ಹೊಂದಿ ನೆಮ್ಮದಿಯಿಂದ ಜೀವಿಸುತ್ತಿದ್ದಾರೆ. ಅಂದ ಮೇಲೆ ಸ್ಥಿತಪ್ರಜ್ಞನಿಗೂ ಒಂದು ಭಾಷೆ ಬೇಡವೇ ? ಸ್ಥಿತಪ್ರಜ್ಞನ ಕೆಲ ಲಕ್ಷಣಗಳನ್ನು ಅವಲೋಕಿಸಿದಾಗ ಯಾವ ಭಾಷೆಯವರೂ ಅವನ ಭಾಷೆ ತಮ್ಮದೆಂದು ವಾದಿಸಲು ಹಾತೊರೆಯುವುದಿಲ್ಲ. ಹಾಗಾದರೆ ಅವನಿಗೆ ಭಾಷೆಯೇ ಇಲ್ಲವೇ ? ಇದ್ದರೆ ಯಾವುದು ? ಎಂಬುದನ್ನು ಆಮೇಲೆ ನೋಡೋಣ.

'ಪ್ರಜಹಾತಿ ಯದಾ ಕಾಮಾನ್' ಎಂಬುಕ್ತಿಯಂತೆ ಮನೋಗತ ಎಲ್ಲ

ಕಾಮನೆಗಳನ್ನೂ, ದೂರ ಮಾಡುವವನೇ ಸ್ಥಿತಪ್ರಜ್ಞ. 'ಸ್ಥಿತಃ ಪ್ರಜ್ಞಾ ಯಸ್ಯ ಸಃ' ಎಂದು ವಿಗ್ರಹ ವಾಕ್ಯ ಮಾಡಲು ಸಾಧ್ಯವಿದ್ದು, ಬುದ್ಧಿಸ್ತಂಭನ ಮಾಂದ್ಯವುಳ್ಳವನೇ ಸ್ಥಿತಪ್ರಜ್ಞನೆನ್ನಬಹುದೇ ? ದುಃಖದಲ್ಲಿ ಉದ್ವಿಗ್ನನಾಗದೆ, ಸುಖಗಳಿಗೆ ಆಸೆ ಪಡದೆ, ರಾಗ–ದ್ವೇಷ, ಭಯ-ಕ್ರೋಧಗಳನ್ನು ದೂರ ಮಾಡಿದ, ಮಾನಾಪಮಾನ, ಜಯಾಪಜಯ, ಶೀತೋಷ್ಣ ಮುಂತಾದ ದ್ವಂದ್ವಗಳಿಂದ ದೂರವಿರುವವನೇ ಸ್ಥಿತಪ್ರಜ್ಞನೆಂದು ಸಂಕ್ಷೇಪದಲ್ಲಿ ಹೇಳಬಹುದು.

ಈ ಎಲ್ಲ ಲಕ್ಷಣಗಳಿಂದ ಕೂಡಿದ ವ್ಯಕ್ತಿ ಬದುಕಿ ಸಾಧಿಸುವುದಾದರೂ ಏನನ್ನು ? ಏಕಾದರೂ ಬದುಕಬೇಕು ? ಈ ಬಗೆಯ ಬದುಕಿನಲ್ಲಿರುವ ಸ್ವಾರಸ್ಯವಾದರೂ ಏನು ? ರಾಗದ್ವೇಷಾದಿಗಳಿಂದಲೇ ಮಾನವ, ಮಾನವನಾಗುವುದು. ದಾನವನಾಗುವುದು. ದೇವನಾಗುವ ಅವಕಾಶವೂ ಉಂಟು. ಇಂತಿರಲು ಸ್ಥಿತಪ್ರಜ್ಞನನ್ನು ಮಾನವನೆಂದು ಕರೆಯಲು ನಮ್ಮ ಮನಸ್ಸು ಹಿಂದೇಟು ಹಾಕುತ್ತದೆ. ಹುಳಿ, ಉಪ್ಪು ಮತ್ತು ಖಾರ ತಿಂದು ನಾಲಿಗೆಯ ರುಚಿ ಗ್ರಹಣ ಶಕ್ತಿಯನ್ನು ವರ್ಧಿಸುವ ಕೆಲಸ ಬಿಟ್ಟು ಸಾತ್ವಿಕಾಹಾರವೆಂದು ಸಪ್ಪೆಯಾದುದನ್ನಷ್ಟೇ ಊಟ ಮಾಡುವವನ ಮನದಲ್ಲಿ ವಿಕಾರಗಳು, ಭಾವನೆಗಳು ಹುಟ್ಟುವುದಾದರೂ ಹೇಗೆ ? ಅಭಿಮಾನ ಉಳಿದಾಗ ದ್ವಂದ್ವಾತೀತನಾಗುವುದು ಸಾಧ್ಯವೇ ?


ನಮ್ಮ ಇತಿಹಾಸದ ಪುಟಗಳಲ್ಲಿ ಅನೇಕ ರಾಜರು ಅಭಿಮಾನ ಶೂನ್ಯರಾಗಿರುವುದಂತೂ ಮನೆಮಾತು. ಅದರಿಂದಾಗಿ ಪರಕೀಯರ ಆಳ್ವಿಕೆ, ದಬ್ಬಾಳಿಕೆಗಳಿಗೆ ಗೋಣಗದೆ ಗುರಿಯಾಗಿರುವುದನ್ನು ಒಟ್ಟಾರೆ ಭವ್ಯಪರಂಪರೆಗೆ ಉತ್ತಮ ನಿದರ್ಶನವಾಗಿರುವುದನ್ನು ಓದುತ್ತೇವೆ. ನಮ್ಮ ಈ ಸ್ಥಿತಪ್ರಜ್ಞತೆಯಲ್ಲಿ ನಾವು ಅಭಿಮಾನ ತಾಳುವುದು ವಿಹಿತವಲ್ಲವೇ ? ಒಟ್ಟಿನಲ್ಲಿ ವ್ಯವಹಾರ ಶೂನ್ಯನಾದವನೇ ಸ್ಥಿತಪ್ರಜ್ಞನೆಂದು ವ್ಯವಹಾರದಲ್ಲಿ ಕುಶಾಗ್ರಮತಿಯಾದವರು ಅಭಿಪ್ರಾಯ ಪಡುತ್ತಾರೆ.

ಇಂತು ಸ್ಥಿತಪ್ರಜ್ಞನ ಕೆಲ ಲಕ್ಷಣಗಳನ್ನು ಅವಲೋಕಿಸಿದ ಮೇಲೆ ಅವನ ಭಾಷೆ ಯಾವುದೆಂಬ ವಿಷಯಕ್ಕೆ ಮರಳಿ ಬರೋಣ. ಸ್ಥಿತಪ್ರಜ್ಞನ ಭಾಷೆಯಾಗಲು ಕನ್ನಡಾದಿ ಭಾರತೀಯ ಭಾಷೆಗಳಾಗಲಿ, ಅಂಗ್ರೇಜಿ ಮುಂತಾದ ಪಾಶ್ಚಿಮಾತ್ಯ ಭಾಷೆಗಳಾಗಲಿ ಅರ್ಹವಾಗಿಲ್ಲವೆಂದು ತಿಳಿಯಲು ನಾವು ಪ್ರಯಾಸ ಪಡಬೇಕಾಗಿಲ್ಲ.

ಯಾವುದೇ ಭಾಷೆಯ ಪ್ರಚಾರ, ಅದರಿಂದ ತಮ್ಮ ಪ್ರಚಾರ ಮತ್ತು ಸವಲತ್ತುಗಳ ಲಾಭ ಸಾಧ್ಯವಾಗಬೇಕಾದರೆ ರಾಗದ್ವೇಷಗಳು ಅನಿವಾರ್ಯ

ಅರ್ಥಾತ್ ತಮ್ಮ ಭಾಷೆಯ ಬಗ್ಗೆ ಇರುವ ರಾಗಕ್ಕಿಂತಲೂ ಇತರ ಭಾಷೆಗಳ ಬಗ್ಗೆ ಇರುವ ದ್ವೇಷವೇ ಭಾಷಾಭಿಮಾನದ ಮೂಲ ಮಂತ್ರವಾಗಿದೆ ಎಂಬುದನ್ನು ನಾವು ನಿತ್ಯ ಗಮನಿಸುತ್ತಿರುವಾಗ ಆ ಭಾವನೆಗಳೇ ಶೂನ್ಯ ವಾಗಿರುವ ಸ್ಥಿತಪ್ರಜ್ಞನ ಭಾಷೆ ಯಾವುದು ಊಹಿಸಿ ನೋಡೋಣ. ಗಯುಟೆಯಂಥ ಜರ್ಮನ್ ಕವಿ ಆ ಭಾಷೆಯ ನಾಟಕವೊಂದನ್ನು ಮೆಚ್ಚಿ, ಅದರ ಅನುವಾದವನ್ನೇ ತಲೆಯ ಮೇಲೆ ಹೊತ್ತು ಕುಣಿದಾಡಿದರೂ ಅಷ್ಟೇ, ಕಾಲಿನಲ್ಲಿ ಹಾಕಿ ತುಳಿದರೂ ಅಷ್ಟೇ. ಯಾವುದಕ್ಕೂ ಚಲಿಸದ, ಪರಿವರ್ತನ ರಹಿತವಾದ ಒಂದೇ ಒಂದು ಭಾಷೆ ಸ್ಥಿತಪ್ರಜ್ಞನ ಭಾಷೆ. ಉದಾಹರಣೆಗೆ ಕನ್ನಡದ ಭಾಷೆಯಲ್ಲಿಯ ಬೈಗಳುಗಳನ್ನೇ ಅವಲೋಕಿಸಿದರೆ ಸ್ಥಿತಪ್ರಜ್ಞನ ಭಾಷೆಯಲ್ಲಿಯ ಅತಿ ಕೆಟ್ಟ ಬೈಗಳು, ಅನಾರ್ಯ, ಜಾರಜನ್ಮ (ಜಾರ್‌ಜನ್ಮ ಸೂಳೆಮಗ ಇದು) ಕನ್ನಡದಲ್ಲಿ ಅತಿ ಪ್ರೀತಿಯ) ಮಾತು.

ಇಷ್ಟಾದರೂ ಟ್ಯೂಬ್‌ಲೈಟ್ (Tube Light) ನ ತಲೆಯುವರಿಗೆ ಆ ಭಾಷೆ ಯಾವುದು ಎಂದು ತಿಳಿಯದಿದ್ದರೆ ನಾನೇ ಹೇಳುತ್ತೇನೆ ಕೇಳಿ—ಸಂಸ್ಕೃತ !!



"ಡಾಕ್ಟರು ಸೌತೇಕಾಯಿ ತಿನ್ನೀಮ್ಮ ಅಂದ್ರಲ್ಲಾ. ಊಟಕ್ಕೆ ಮುಂಚೇನೋ ? ಊಟ ಆದ ಮೇಲೋ ?"

ವಕೀಲ ವಕಾಲತ್ತು

—ಗಾಯತ್ರಿ

ಲೋಕೇಶ, ಕೋರ್ಟಿನ ಹತ್ತಿರ ತನ್ನ ಕಾರನ್ನು ನಿಲ್ಲಿಸಿದ. ಅಲ್ಲಿ ಯಾರನ್ನು ನೋಡಬೇಕು, ಏನು ಮಾಡಬೇಕು ಎಂದು ತಿಳಿಯದೆ ಸುತ್ತ ಕಣ್ಣಾಡಿಸಿದ.

ಕರೀಕೋಟು ಹಾಕಿಕೊಂಡ (ಬಹುಶಃ ಮದುವೆಯಾದಿರಬಹುದು) ಚಿಕ್ಕ ವಯಸ್ಸಿನ ಒಬ್ಬ ವಕೀಲ ಲೋಕೇಶನ ಹತ್ತಿರ ಬಂದು. "ಯಾರು ಸರ್ ? ಯಾರು ಬೇಕಾಗಿತ್ತು ? ಯಾವ ಕೇಸು ? ಬನ್ನಿ, ನಾನೆಲ್ಲಾ ನೋಡಿಕೋತೀನಿ" ಎಂದು ಒಂದೇ ಉಸುರಿನಲ್ಲಿ ಒದರಿ ಲಾಯರುಗಳ ಆಫೀಸಿನ ಹತ್ತಿರ ಕರೆದುಕೊಂಡು ಹೋದ.

ಮತ್ತೇನೂ ಮಾಡಲು ತಿಳಿಯದೆ ಲೋಕೇಶ ಅವನನ್ನು ಹಿಂಬಾಲಿಸಿದ. ವಕೀಲ ಲೋಕೇಶನಿಗೆ ಒಂದು ಕುರ್ಚಿಯನ್ನು ತೋರಿಸಿ, ತಾನೂ ಒಂದು ಮುರುಕು ಸ್ಟೂಲಿನ ಮೇಲೆ ಕೂತು, "ಬೈ ದ ವೇ, ಐ ಯಾಮ್ ಶ್ರೀಪತಿ.B.Sc, LLB. ಜೂನಿಯರ್ ಟು Advocate ಕಪಿನೀಪತಿರಾವ್" ಎಂದು ಕೈ ಚಾಚಿದ.

"ಸಂತೋಷ. ನಾನು ಲೋಕೇಶ್, Engineer and Consultant, ಲೋಕೇಶ ಕೈ ಕುಲುಕಿದ.

ಲೋಕೇಶನಿಗೆ ಅನುಮಾನ. ಇವನು ಯಾರೋ ಹೊಸಬ. ಕೇಸನ್ನು ಹೇಗೆ ಮಾಡುತ್ತಾನೋ ಏನೋ ? ಆದರೂ ಒಂದೊಂದು ಸಾರಿ ಹೊಸಬರೇ ಸರಿ... ಮುತವರ್ಜಿಯಿಂದ ಪುರ.ಸೊತ್ತಾಗಿ ಕೆಲಸ ಮಾಡುತ್ತಾರೆ. ಇವನೂ ಚುರುಕಾಗಿ ಬುದ್ಧಿವಂತನಂತೆ ಕಾಣುತ್ತಾನೆ ಸರಿ ! ಇವನೇ ಇರಲಿ ಅಂತ ನಿರ್ಧರಿಸಿಬಿಟ್ಟ.

"ಹೇಳಿ ಸಾರ್ ಏನಾಗಬೇಕು ?" ಶ್ರೀಪತಿಯ ದೇಶಾವರಿ ನಗೆ (ಹುಡುಗ ಇನ್ನೂ ಚಿಕ್ಕವನು, ಇಂಜಿನಿಯರ್ ಬೇರೆ ಎಂದು ಮನಸ್ಸಿನಲ್ಲೇ ಲೆಕ್ಕ ಹಾಕುತ್ತಾ...)

"ನೋಡಿ. ಸಾರ್. ನಾನು ಮದುವೆಯಾಗಿ ನಾಲ್ಕು ತಿಂಗಳಾಯ್ತು. ಹೆಂಡತಿಗೆ Private firmನಲ್ಲಿ ಕೆಲಸ. ಮದುವೆಯಾದ ಲಾಗಾಯ್ತು ನಮ್ಮಲ್ಲಿ ಡಿಫರೆನ್ಸ್ ಆಫ್ ಒಪೀನಿಯನ್ನೂ, ಅದಕ್ಕೆ Divorceಊ....... ಅರ್ಧಕ್ಕೇ ನಿಲ್ಲಿಸಿದ.

"ಓಹೋ ದಾಂಪತ್ಯ ವಿರಸ ! ಅದಕ್ಕೇನಂತೆ, ಕೇಸು file ಮಾಡಿ details ಕೊಡಿ. Within no time ವಿಚ್ಛೇದನ ಕೊಡಿಸೋಣ"

ಲೋಕೇಶ ಕೊಡಬೇಕಾದ ಮಾಹಿತಿಗಳನ್ನೆಲ್ಲಾ ಕೊಟ್ಟು "feesಉ .. ! ?"

"ನೋ, ನೋ ನೋ ಅದೆಲ್ಲಾ ಈಗ್ಯಾಕೆ, ಆಮೇಲೆ ನೋಡಿಕೊಳ್ಳೋಣ ಬಿಡಿ. ನಿಮ್ಮ Phone ನಂಬರು ಕೊಟ್ಹೋಗಿ, ನಾನೇ Phone ಮಾಡ್ತೀನಿ. ಸದ್ಯಕ್ಕೆ ನಾನಿನ್ನೂ ಆಫೀಸ್ open ಮಾಡಿಲ್ಲ. ನನ್ನನ್ನು ಇಲ್ಲೇ ನೋಡಬಹುದು. ಇದು ನನ್ನ friend ದು. ಯಾವಾಗ ಬಂದರೂ ಸಿಗ್ತೀನಿ !"

* * *

ಮೂರು ತಿಂಗಳು ಬಿಟ್ಟು ಲೋಕೇಶ, ಶ್ರೀಪತಿಯ ಹತ್ತಿರ ಬಂದ. "ಪರಿಸ್ಥಿತಿ ಬಹಳ ಬಿಗಡಾಯಿಸಿದೆ ಸಾರ್ ನನ್ನ ಹೆಂಡತಿನ ಇಲ್ಲಿಗೇ ಕರೆದುಕೊಂಡು ಬರ್ಲಾ. ನೀವೇನಾದರೂ ಹೇಳಿದರೆ ....

"ನೋ. ನೋ, ನೋ. ಅದೆಲ್ಲಾ ಯಾಕೆ, ನಿಮ್ಮ ಕೇಸು ಫೈಲ್ ಮಾಡ್ತೀನಿ. ಇನ್ನೇನು ಹಿಯರಿಂಗ್‌ಗೆ ಬಂದು ಬಿಡುತ್ತೆ. ಈ ಹೆಂಗಸರಿಗೆಲ್ಲಾ ನಾವು ಸೋಲಲೇ ಬಾರದು. ನಿಮ್ಮ ಸುಖ ಸಂತೋಷವೇ ನಮಗೆ ಮುಖ್ಯ. ನಾನೇ ನಿಮಗೆ Phone ಮಾಡ್ತೀನಿ. ಅಲ್ಲಿವರೆಗೆ ನಿವ್ಯಾಕೆ ಸುಮ್ಮನೇ ಬರ್ತೀರಾ. ಅಂದ್ಹಾಗೆ ಏನಾದರೂ feesಊ ?"

* * *

ಆರು ತಿಂಗಳ ನಂತರ ಲೋಕೇಶ ಶ್ರೀಪತಿಯ ಹತ್ತಿರ ಬಂದ.

"ಏನು ಸಾರ್ Phone ಮಾಡಿದ್ದಿರಿ ?"

"ಏನಿಲ್ಲಾ ಕೇಸು file ಮಾಡ್ತೀನಿ. ಅದಕ್ಕೇ ....

ಲೋಕೇಶ ದುಡ್ಡು ಕೊಟ್ಟು car start ಮಾಡಿದ.

* * *

ಒಂದು ವರ್ಷ "ಶ್ರೀಪತಿ ರಾವ್, B.Sc LLB, ಲಾಯರು" ಬೋರ್ಡಿನ ಮುಂದೆ ಲೋಕೇಶ ಕಾರು ನಿಲ್ಲಿಸಿದ.

"ಏನ್ಸಾರ್ ಏನಾಯಿತು ಕೇಸು ?"

"ಓಹೋಹೋ ಬನ್ನಿ ಬನ್ನಿ. ಏನೂ ? ಆವತ್ತು ಬಂದವರು ಮತ್ತೆ ಈ ಕಡೆ ತಿರುಗಿ ನೋಡೋದೇ ಬೇಡವಾ. ಆಗಾಗ ಬಂದು ವಿಚಾರಿಸಿಕೊಂಡು ಹೋಗ ಬೇಕ್ರಿ.

ಇಲ್ಲದಿದ್ರೆ Phone ಆದ್ರೂ ಮಾಡ್ತಾ ಇರಿ, ನಿಮ್ದೊಂದೇ ಕೇಸೇನ್ರಿ ನಮಗೆ ?"

ಲೋಕೇಶ್ ವಿನೀತನಾಗಿ Phone ನಂಬರ್ ಬರೆದುಕೊಂಡ.

* * *

ಎರಡು ವರ್ಷ ಶ್ರೀಪತಿರಾಯರ ಹೊಸ ಆಫೀಸಿನ ಮುಂದೆ ಲೋಕೇಶ ತನ್ನ ಸ್ಕೂಟರ್ ನಿಲ್ಲಿಸಿದ. ದೊಡ್ಡದಾದ ಬೋರ್ಡು.

ಶ್ರೀ ಶ್ರೀಪತಿರಾಯರು, BSc. LLB, Advocate. ಆಫೀಸಿನ ಮುಂದೆ ಹಲವಾರು ಜನ. ಲೋಕೇಶ ತನ್ನ ಸರದಿ ಕಾದು, ನೋಡುವಷ್ಟರಲ್ಲಿ ಊಟದ ಸಮಯ.

"ಓ ಹೋ ಹೋ ಬನ್ನಿ. ಇನ್ನೇನು ನಿಮ್ಮ ಹಿಯರಿಂಗು ನಾಳೇನೋ ನಾಳಿದ್ದೋ ಬಂದು ಬಿಡುತ್ತೆ. ಅದಕ್ಕಾಗೆ feesಉ —

ಆಗತಾನೇ ಬಂದಿದ್ದ ಸಂಬಳದಲ್ಲಿ ಅರ್ಧ ತೆತ್ತು ಹೊರ ನಡೆದ ಲೋಕೇಶ.

* * * *

ನಾಲ್ಕು ವರ್ಷ ಲೋಕೇಶ ತನ್ನ ಲೂನಾವನ್ನು ಶ್ರೀಪತಿರಾಯರ ಬಿಲ್ಡಿಂಗ್ ಮುಂದೆ ನಿಲ್ಲಿಸಿದ.

ಜ್ಯೂನಿಯರುಗಳ ಹತ್ತಿರ ಮಾತಾಡಿ, Accountant ಹತ್ತಿರ feesನ ಬಗ್ಗೆ ಒದರಾಡಿ, ಕೊಸರಾಡಿ, ರಾಯರ ಹತ್ತಿರ ಹೋದ. ರಾಯರು ಅನೇಕ ಲಾಯರುಗಳ ಜತೆ ಬಿಸಿಯೋ ಬಿಸಿ. ಕೊನೆಗೆ ಇವನನ್ನು ತಲೆ ಎತ್ತಿ ಏನು ಎಂಬಂತೆ ನೋಡಿದರು.

"ಸಾರ್ ಅದೇ ಕೇಸು......ಆಕೆ ಈಗ ತನ್ನ ಸ್ವಭಾವ......"

"ಹೌದ್ರಿ ಈ ಹೆಂಗಸರೇ ಹೀಗೆ. ಸತ್ರೂ ತಮ್ಮ ಸ್ವಭಾವ ತಿದ್ದಿಕೊಳ್ಳಲ್ಲ. ಇನ್ನೇನು Next week ಹಿಯರಿಂಗು. ನಾನೆಲ್ಲಾ ನೋಡಿಕೊಳ್ತೀನಿ. ನೀವು ಹೋಗಿ.

* * * *

ಆರು ವರ್ಷ : ಲೋಕೇಶ ತನ್ನ ಸೈಕಲ್ಲನ್ನ ಬಿಲ್ಡಿಂಗಿನ ಮುಂದೆ ನಿಲ್ಲಿಸಿದ. ಎರಡಂತಸ್ತಿನ ಮಹಡಿ ಪೂರ್ತಿಯಾಗಿತ್ತು. ಸುಣ್ಣ, ಬಣ್ಣ ಮಾಡುತ್ತಿದ್ದರು. ಬುರ್ರ್ ಅಂತ ಒಂದು ಬೆಂಜ್ ಕಾರು ಬಂದು ನಿಂತಿತು. ಡ್ರೈವರು ಕಾರಿನಿಂದಿಳಿದು ಹಿಂದುಗಡೆ ಬಾಗಿಲನ್ನು ತೆರೆದ. Advocate ಶ್ರೀಪತಿರಾಯರು, ಅನೇಕ ಸಂಘ ಸಂಸ್ಥೆಗಳ ಪ್ರೆಸಿಡೆಂಟರು, ಕಾರಿನಿಂದಿಳಿದು, ಕಾದು ನಿಂತಿದ್ದ ಜನಗಳ ನಮಸ್ಕಾರಗಳನ್ನು ನವಿರಾಗಿ ಸ್ವೀಕರಿಸಿ ಒಳನಡೆದರು.

ಮಾಮೂಲಿನಂತೆ ಕಾದು, ಕಾದು, ಲೋಕೇಶ ಕೊನೇಗೆ ರಾಯರ ದರ್ಶನ ಸಂಪಾದಿಸಿದ.

"ಓಹೋ, ನೀವಾ ? Next week ರೀ ನಿಮ್ಮದು. Fees pay ಮಾಡಿದೀರಾ?"

"ಅದಲ್ಲ ಸಾರ್, ಈಗ, ಅದು, ಅದು........

"ಇಲ್ಲಾ ರೀ ಈ ವಾರ ನಿಮ್ಮದು close ಮಾಡಿ ಬಿಡ್ತೀನಿ. ಇಷ್ಟು ವರ್ಷ, ಇರುವ ಬುದ್ಧೀನೆಲ್ಲಾ ಖರ್ಚು ಮಾಡಿ, ಏನೇನೋ ಮಾಡಿದ್ದೀನಿ (ಲೋಕೇಶನ ದೃಷ್ಟಿ ಅಪ್ರಯತ್ನವಾಗಿ ಅವರ Leather furniture, carpet, air conditioner, phone ಗಳ ಮೇಲೆ ಹೋಯಿತು) ನಿಮಗೇ ಜಯ ಹೋಗ್ರಿ

ಅರ್ಜಂಟ್ ಮಾಡಿ ಲೋಕೇಶನನ್ನು ಹೊರದಬ್ಬಿದರು.

* * *

ಎಂಟು ವರುಷ ಕೋರ್ಟ್‌ನಲ್ಲಿ ಒಂದೇ ಗುಜುಗುಜು. ಅಡ್ವೊಕೇಟ್ ಶ್ರೀಪತಿರಾಯರ ಕೇಸೆಂದರೆ, ಯಾವಾಗಲೂ ಜನರಿಗೆ ಕುತೂಹಲ. ಲೋಕೇಶ ಹ್ಯಾಪ್ ಮೋರೆ ಹಾಕಿಕೊಂಡು ಕಟಕಟೆಯಲ್ಲಿ ನಿಂತಿದ್ದ.

ಲಾಯರು ಶ್ರೀ ಶ್ರೀಪತಿರಾಯರು, ಸಿನಿಮೀಯವಾಗಿ, ತಮ್ಮ ಕರೀಕೋಟಿನಲ್ಲಿ ಕೈ ಇಳಿಬಿಟ್ಟು ಅತ್ತಿಂದಿತ್ತ, ಇತ್ತಿಂದತ್ತ ವಾಕ್ ಮಾಡುತ್ತಾ ಡೈಲಾಗಿಸುತ್ತಿದ್ದರು. ಅಬ್ಬರದಿಂದ, ಏರಿದ ಸ್ವರದಲ್ಲಿ, ಲೋಕೇಶನ ಪರವಾಗಿ ಭಾಷಣ ಬಿಗಿದದ್ದೇ ಬಿಗಿದದ್ದು.

"ಮೆಂಟಲ್ ಎಗೊನಿ, ಮೆಂಟಲ್ ಟಾರ್ಚರ್ರು, ನಾನ್ ಕೋಆಪರೇಷನ್ ಮ್ಯಾರಿಟಲ್ ಇನ್‌ಕಂಪಾಟಿಬಿಲಿಟಿ, ಇಲ್ಟ್ರೀಟ್‌ಮೆಂಟು, ಇನ್ನೂ ಏನೇನೋ ಕಾರಣ ಗಳನ್ನು ಕೊಟ್ಟಿದ್ದೇ ಕೊಟ್ಟಿದ್ದು.

ಕೊನೆಗೂ ತೀರ್ಪು :— ಲೋಕೇಶನಿಗೆ ಹೆಂಡತಿಯಿಂದ ವಿವಾಹ ವಿಚ್ಛೇದನ.

ಇದ್ದಕ್ಕಿದ್ದಂತೆ, ಜನರ ಗುಂಪಿನಿಂದ ಒಬ್ಬ ಮಹಿಳೆ. ಮೂವರು ಮಕ್ಕಳೊಡನೆ ಗೋಳೋ ಎಂದು ಅಳುತ್ತಾ ಕಟಕಟೆಗೆ ಧಾವಿಸಿ. ಲೋಕೇಶನನ್ನು ತಬ್ಬಿಕೊಂಡು ಹಿಗ್ಗಾಮುಗ್ಗಾ ಎಳೆದಾಡತೊಡಗಿದಳು.

ನ್ಯಾಯಾಧೀಶರು "ಯಾರಮ್ಮ ನೀವು ? ಏನಿದು ?" ಎಂದು ಗರ್ಜಿಸಿದರು.

ಆಕೆ "ಯುವರ್ ಆನರ್ ನಾನು ಇವರ ಧರ್ಮಪತ್ನಿ. ಎಂಟು ವರ್ಷದ ಮದುವೆ ನಮ್ಮದು. ಮೂರು ಮುತ್ತಿನಂಥಾ ಮಕ್ಕಳಿವು ಮದುವೆ ಹೊಸದರಲ್ಲಿ ಒಂದೆರಡು ಸಲ ಜಗಳಾಡಿದ್ದುಂಟು. ಇವರು ಡೈವೋರ್ಸ್ ಅಂತ ಕುಣಿದಿದ್ದೂ ನಿಜ. ಆದರೆ ಹಿರಿಯರ ಹಿತನುಡಿಗಳಿಂದ ನಾವು ಒಡೆದ ಮನವನ್ನೂ ಮನೆಯನ್ನೂ ಕಾಪಾಡಿ ಕೊಂಡಿದ್ದೇವೆ. ಲಾಯರಿಗೆ fees ತೆತ್ತು ಬಡವರಾದರೂ. ಹೊಂದಾಣಿಕೆಗೆ ಬಡ ತನ ಬಂದಿಲ್ಲ. ನಮ್ಮ ಸಂಸಾರಾನ ಯಾರೂ ಬೇರ್ಪಡಿಸಲಾರರು. ಅಂತ ದಿಟ್ಟ ತನದಿಂದ ನುಡಿದಳು.

ಅಲ್ಲಿನ Press photographers ಎಲ್ಲ photoಗಳನ್ನ ಕ್ಲಿಕ್ಕಿಸಿದ್ದೂ ಕ್ಲಿಕ್ಕಿಸಿದ್ದೇ. ಅಡ್ವೊಕೇಟ್ ಶ್ರೀಪತಿರಾಯರು ಮೆಲ್ಲಗೆ ಜಾರಿಕೊಂಡಿದ್ದನ್ನು ಜನಜಂಗುಳಿಯಲ್ಲಿ ಯಾರೂ ಗಮನಿಸಲಿಲ್ಲ. ೦

ರೆಯಿಲು ಟ್ರಾಕಿನ ದುರಂತ

—ಆರತಿ

ಕಡಿದಾದ ಬಂಡೆಗಳ
ಸೀಳಿ ದಾರಿಯ ಕೊರೆದು
ಮೈ ಚಾಚಿ ಮಲಗಿಹುದು
ರೆಯಿಲು ಹಾದಿ —೧

ಕಾಡು ಕೆರೆಗಳ ದಾಟಿ
ಬಾಗುತ್ತ ಸಾಗಿರುವ
ಜೋಡಿ ಹಳಿಗಳ ಮಿಲನ
ದಿಶೆಯ ಅಂಚಿನಲಿ —೨

ಅಲ್ಲಿ ಕಾಡಿನ ನಡುವೆ
ಹಳಿಯೆ ತಲೆದಿಂಬಾಗೆ
ಮಲಗಿಹಳು ಹತಭಾಗ್ಯೆ
ಆಶೆಗಳ ತೊರೆದು —೩

ಯಾವ ದುಗುಡವೋ ಏನೋ?
ಕಷ್ಟಗಳು ಎಷ್ಟಿವೆಯೋ ?
ಪಾಪ, ತಾರುಣ್ಯದಲೆ
ಕೊನೆಯ ಕಂಡಿಹಳು —೪

"ಏಳಮ್ಮ, ಇದು ಸಲ್ಲ.
ಏಕಿನಿತು ವೈರಾಗ್ಯ
ಬೇಸರಾಯಿತೆ ಬಾಳು
ಇಷ್ಟು ಬೇಗ ?" —೫

"ಹೇಳಲೇನಿಹುದಣ್ಣ
ನಾನೋರ್ವ ಲೇಖಕಿಯು
ನನ್ನ ಬರಹಗಳೆಲ್ಲ
ಬುಟ್ಟಿ ಪಾಲು ! —೬

ಪಾಪಿ, ಸಂಪಾದಕಗೆ
ಕರುಣೆಯೆಂಬುದೆ ಇಲ್ಲ
ಅಚ್ಚಿಸನು ಎಂದೆಂದು
ನನ್ನ ಕಥೆಗಳನು ! —೭

ಉದ್ದ ಬಹುವಾಯ್ತಂತೆ
ವರ್ಣನೆಯು ಹೆಚ್ಚಂತೆ
ಒಳಸಿರುವ ಭಾಷೆಯೂ
ಬಿಗಿ ಸಾಲದಂತೆ !" —೮

"ಚಿಂತೆಯನು ಬಿಡು ತಂಗಿ
ಬುದ್ಧಿ ಕಲಿಸುವ ನಾವು
ಇಲ್ಲಿ ಪಿಸ್ತೂಲಿಹುದು
ತೋರೆನಗೆ ದಾರಿ !" —೯

(ಶ್ರೀಮತಿ ಆರತಿಯವರ ಸ್ವಂತ ಅನುಭವವಿದಲ್ಲವೆಂದು ಬಹುವಾಗಿ ಆಶಿಸುತ್ತೇವೆ —ಸಂಪಾದಕ.)

"ಮನಶ್ಯಾಂತಿ"—ಕ್ವಿಜ್

—ಶಿವು

ಇದು ಆತಂಕದ ಯುಗ. ಎಲ್ಲಿ ಯಾರನ್ನ ನೋಡಿದರೂ. ಬರೀ ಆತಂಕ ಪಚ್ಚಿಕೊಂಡು ಓಡಾಡ ತ್ತಿರುತ್ತಾರೆ. ಸೀಟು ಸಿಕ್ಕಿಲ್ಲ. ವರ ಸಿಕ್ಕಿಲ್ಲ, ಸೈಟು ಸಿಕ್ಕಿಲ್ಲ, ಸಿಮೆಂಟು ಸಿಕ್ಕಿಲ್ಲ. ಪ್ರಮೋಷನ್ ಸಿಕ್ಕಿಲ್ಲ. ಪದವಿ ಸಿಕ್ಕಿಲ್ಲ, ಹೀಗೆ ನೂರಾರು "ಸಿಕ್ಕಿಲ್ಲ–ವರಿ"ಗಳ ಜೊತೆಗೆ, ಡಿಮಾಂಡ್ ನೋಟೀಸ್ ಬಂತು, ಲಾಯರ್ ನೋಟೀಸ್ ಬಂತು. ನಪಾಸ್ ರಿಸಲ್ಟ್ ಬಂತು. ಕೋರ್ಟ್ ಡಿಕ್ರಿ ಬಂತು, ಡಾಕ್ಟರ್ ಬಿಲ್ ಬಂತು, ಪವರ್ ಕಟ್ ಬಂತು, ಹೀಗೆ "ಬಂತು–ವರಿ"ಗಳು ಸೇರಿ ಬಡಜನಗಳ್ನ ಕೊಲ್ತಾ ಇವೆ. ಇದಕ್ಕೆ ಪರಿಹಾರಾನೇ ಇಲ್ಲವೆ ? ಇದೆ. ಖಂಡಿತಾ ಇದೆ. ಎಲ್ಲಾ ನಿಮ್ಮ ಮನಸ್ಸಿನ ಸ್ಥಿತೀನ ಅವಲಂಬಿಸಿರುತ್ತೆ. ಕೆಳಗಿನ ಪ್ರಶ್ನೆ ಮಾಲೆನ ಉತ್ತರಿಸಿ, ನಿಮ್ಮ ಆತಂಕದ ಮಟ್ಟ ಎಷ್ಟಿದೆ, ನಿಮ್ಮ ಜಾಯಮಾನ ಎಂಥದು, "ಸ್ಥಿತಪ್ರಜ್ಞ ಪಟ್ಟದಿಂದ ನೀವು ಎಷ್ಟು ದೂರ ಇದ್ದೀರ ಎಂಬುದನ್ನೆಲ್ಲಾ ನೀವೇ ತಿಳೀಬಹುದು. ಬೆಸ್ಟ್ ಆಫ್ ಲಕ್ !

೧) ನೀವು ಕೊಟ್ಟಿರೋ ಟೆರಿಕಾಟ್ ಬಟ್ಟೇನ ಷರ್ಟಿನ ರೂಪಕ್ಕೆ ತರುಕ್ಕೆ ನಿಮ್ಮ ದರ್ಜಿ ನಿಮ್ಮನ್ನ ಒಂದು ತಿಂಗಳಿಂದ ಆಗ, ಈಗ ಅಂತ ಸತಾಯಿಸುತ್ತಿದ್ದಾನೆ. ಕೊನೆಗೆ "ಎಲ್ಲಾ ರೆಡಿಯಾಗಿದೆ ಸಾರ್, ಗುಂಡಿ ಹೊಲಿಯೋದೊಂದು ಬಾಕಿ, ಸಂಜೆಗೆ ರೆಡಿಯಾಗುತ್ತೆ" ಅಂತ ಹೇಳಿದ ಮಾತನ್ನ ನಂಬಿ ನೀವು ಸಂಜೆ ಹೋಗ್ತೀರ. ದರ್ಜಿ ಮೇಲಿನ ಬಡುವಿನಿಂದ ಬಟ್ಟೆಗಳನ್ನ ತೆಗಿಯೋ ಗಲಾಟೇಲಿ ಒಂದು ಪ್ಯಾಕೆಟ್ ಕೆಳಗೆ ಬೀಳುತ್ತೆ. ಬಿಚ್ಚಿ ನೋಡಿದರೆ ನೀವು ಕೊಟ್ಟ ಟೆರಿಕಾಟ್ ಬಟ್ಟೆ ! ಬಿಸ್ಕೆಟ್ ಜಾಹೀರಾತಿನ ತರಹ, ಮನುಷ್ಯರ ಕೈಯಿಂದ ಮುಟ್ಟಲ್ಪಡದೆ ಪವಿತ್ರವಾಗಿ ಕೂತಿದೆ, ನಿಮ್ಮ ಪೆಚ್ಚು ಮುಖ ನೋಡಿ ದರ್ಜಿ ನಸುನಗುತ್ತಾನೆ. ನೀವು,

ಅ) "ಸಾಕು ನಿನ್ನ ಹೊಲಿಯಾಟ" ಅಂತ ರೇಗಾಡಿ, ಬಟ್ಟೇನ ಹಾಗೆ ಕಸಿದುಕೊಂಡು ಬೇರೆ ದರ್ಜಿ ಹತ್ರ ಕೊಟ್ಟು, ದರ್ಜಿ ಪ್ರಕರಣದ ಎರಡನೆ ಅಧ್ಯಾಯಕ್ಕೆ ತಯಾರಾಗ್ತೀರ.

ಆ) "ಏನು ಮಾರಾಯ್ರೆ, ನೀವೇ ಹೀಗೆ ಕೈ ಕೊಟ್ರೆ, ಎಂತಾ ಮಾಡೋದು.

ಬೇಗ ಕೊಡಿರಲ್ಲೋ !" ಅಂತ ತಾಜಾ ಹೊಡೆದು ಬರುತ್ತೀರ.

ಇ) ಟಾರ್ಜಾನ್‌ನಂತೆ "ಓೀೀೀೀ" ಅಂತ ಊಳಿಡಲು ಶುರು ಹಚ್ಚುತ್ತೀರ.

೨) ಕಳೆದ ಒಂದು ವಾರದಿಂದ ದಿನಕ್ಕೆ ನಾಲ್ಕು ಬಾರಿ ನಿಮ್ಮಾಕೆ, ಅವರಪ್ಪ ಇಂದು ಸಂಜೆ ಎಂಟೂವರೆಗೆ ಬಸ್ಸಿನಲ್ಲಿ ಊರಿಗೆ ಬರುವ ಸಂಗತಿ ಜ್ಞಾಪಿಸುತ್ತಿದ್ದಾಳೆ. ಬಸ್ ಸ್ಟಾಂಡಿನಲ್ಲಿ ಅವರನ್ನು ಇದಿರುಗೊಂಡು, ಮನೆಗೆ ಕರೆತರುವ ಭಾರ ನಿಮ್ಮದು. ನೀವು ಬೇಗನೆ ಮನೆ ಬಿಟ್ಟು, ಇನ್ನೂ "ಬೇಜಾರ್" ಟೈಂ ಇದ್ದುದರಿಂದ, ಕ್ಲಬ್‌ನಲ್ಲಿ ಒಂದೇ ಒಂದು ರೌಂಡ್ ಇಸ್ಪೀಟಿಗೆ ಇಳಿಯುತ್ತೀರ. ಇಸ್ಪೀಟಿನ ಮಂಪರಿನಿಂದ ಕಣ್ತೆರದು ಹೊರಡುವಷ್ಟರಲ್ಲಿ ಎಂಟೂ ಮುಕ್ಕಾಲು. ಬಸ್ ಸ್ಟಾಂಡಿಗೆ ಓಡಿ ನೋಡಿದರೆ, ಬಸ್ ಬಂದು ಆಗ್ಲೇ ಅರ್ಧ ಘಂಟೆ. ನೀವು,

ಅ) ಪೆಚ್ಚು ಮುಖ ಹಾಕಿಕೊಂಡು ಮನೆಗೆ ಬಂದು ರಾತ್ರಿಯೆಲ್ಲಾ ರಾಮಾಯಣ ಕೇಳುವ ತಯಾರಿ ನಡಸ್ತೀರ.

ಆ) ಬೇಗ ಹತ್ತಿರದ ಡಾಕ್ಟರ ಹತ್ತಿರ ಹೋಗಿ ಉಳುಕಿಲ್ಲದ ಕೈಗೆ ತೂಗುಪಟ್ಟಿ ಕಟ್ಟಿಸಿಕೊಂಡು, ಕುಂಟುತ್ತಾ ಮನೆಗೆ ಬಂದು, ಢಿಕ್ಕಿ ಹೊಡೆಯದ ಮೋಟಾರ್ ಸೈಕಲ್‌ನ್ನು ಶಪಿಸಿ, ಮಡದಿಯ ಜೊತೆಗೆ, ಮಾವನ ಸಹಾನುಭೂತಿಯನ್ನೂ ಸಂಪಾದಿಸುತ್ತೀರ.

೩) ಬ್ಯಾಂಕ್‌ನಲ್ಲಿ ಹಣ ತೆಗೆಯಲು ಹೋಗಿದ್ದೀರ. ಕಳೆದ ಅರ್ಧ ಘಂಟೆಯಿಂದ ನೀವು ಕೊಟ್ಟ ಚೆಕ್ ಕ್ಯಾಷ್ ಕೌಂಟರಿಗೆ ಬಂದಿಲ್ಲ. ನೋಡಿದರೆ, ಬ್ಯಾಂಕ್ ಖಾತೆ ಪುಸ್ತಕ ಹಾಗೂ ನಿಮ್ಮ ಚೆಕ್ಕನ್ನು ಹಿಡಿದ ಬ್ಯಾಂಕ್‌ನ "ಪೀವನ್" ಪಕ್ಕದ ಟೇಬಲ್ಲಿನ ಮೇಡಂ ಜೊತೆ ಯಾವುದೋ ಗಹನವಾದ ಚರ್ಚೆಯಲ್ಲಿ ಮಗ್ನನಾಗಿದ್ದಾನೆ. ಕ್ಯಾಷ್ ಕೌಂಟರ್ ಮುಚ್ಚಲು ಇನ್ನು ಐದೇ ನಿಮಿಷ. ನೀವು,

ಅ) ಮೇನೇಜರ್ ಹತ್ತಿರ ಹೋಗಿ, ರೇಗಾಡಿ, ಅವರು ಪೀವನ್ನನ್ನ ಕರೆದು ವಿವರ ತಿಳಿಯುತ್ತಿರುವಾಗಲೇ ಕ್ಯಾಷ್ ಕೌಂಟರ್ ಬಂದ್ ಆಗುವುದನ್ನು ಹತಾಶರಾಗಿ ನೋಡುತ್ತೀರ.

ಆ) ಸಂಭಾಷಣೆಯಲ್ಲಿ ತಲ್ಲೀನನಾಗಿರುವ ಪೀವನ್ನನ ಕೈಯಿಂದ ಮೆಲ್ಲಗೆ ಖಾತೆ

ಪುಸ್ತಕ ಬಿಡಿಸಿಕೊಂಡು, ಕ್ಯಾಷ್ ಕೌಂಟರಿಗೆ ಕೊಟ್ಟು ನಿಮ್ಮ ಹಣ ಪಡೆಯುತ್ತೀರ.

ಇ) ಈ ಬ್ಯಾಂಕ್‌ನಲ್ಲೀದ ಖಾತೆ ಹೊರತೆಗೆದು, ಬೇರೇ ಬ್ಯಾಂಕಿನಲ್ಲಿಟ್ಟು, ಚರಿತ್ರೆ ಪುನರಾವರ್ತನೆ ಆಗೋದನ್ನ ಸಿದ್ಧೀಕರಿಸ್ತೀರ.

೪) ದೀಪಾವಳಿ ಹಿಂದಿನ ದಿನ. ಮಡದಿ ಮಕ್ಕಳ ಸಮೇತ ಸೀರೆ ವ್ಯಾಪಾರಕ್ಕೆ ಹೊರಟಿದ್ದೀರ ಅಂಗಡಿಯಲ್ಲಿನ ಸೀರೆಗಳನ್ನೆಲ್ಲಾ ಹೊರಗೆ ರಾಶಿ ಹಾಕಿಸಿ. ಆಳೆದೂ. ಸುರಿದೂ, ಕೊನೇಗೆ ನಿಮ್ಮಾಕೆ ಒಂದು ಸೀರೆ ಚುನಾಯಿಸುತ್ತಾಳೆ. ಪರ್ಸ್ ತೆಗೆದಾಗ ಹಣ ತರಲು ಮರೆತಿರುವುದು ತಿಳಿಯುತ್ತೆ, ನಿಮಗೆ ಮಾತ್ರ. ನೀವು.

ಅ) ಇದ್ದ ಸಂಗತಿ ಹೇಳಿ, ಅಂಗಡಿಯಿಂದ ಹೊರ ಬಂದು, ಮೌನದಿಂದ ಮನೆಗೆ ತೆರಳಿ.................. ಅಬ್ಬ ಮುಂದಾಗುವುದನ್ನು ಊಹಿಸಲೂ ಸಾಧ್ಯವಿಲ್ಲ ಬಿಡಿ.

ಆ) ಹಣ ಇಲ್ಲದಿರುವ ಸುಳಿವು ಕೊಡದೇ, ಇನ್ನೂ ಕೆಲವು ಸೀರೆಗಳನ್ನು ತೆಗೆಸಿ, ಇರುವ ಸೀರೆಗಳೆಲ್ಲಾ ನಿಮ್ಮಾಕೆಯ ಬಣ್ಣಕ್ಕೆ ಕಳಪೆ ಎಂದು ಹಠ ಹಿಡಿದು, ಹೊಸ ಮಾಲನ್ನ ಒಂದೇ ವಾರದಲ್ಲಿ ತರಿಸಬೇಕೆಂದು ಅಂಗಡಿಯವನಿಗೆ ಆಜ್ಞೆ ನೀಡಿ. ಮಡದಿಯ ಮೆಚ್ಚುಗೆಯ ನೋಟದ ಬೆಳಕಿನಿಂದಲೇ ಹಾದಿ ಕಂಡು ಮನೆ ಸೇರುತ್ತೀರ.

೫) ಸಿನಿಮಾ ಮಂದಿರದ ಮುಂದೆ ಸಂಜೆ ಕ್ಯೂ ನಿಂತಿದೀರ. ಬಹಳ ಜನಪ್ರಿಯ ಚಿತ್ರ. "ಒಬ್ಬೊಬ್ಬರಿಗೆ ಒಂದು ಟಿಕೆಟ್ ಮಾತ್ರ" ಎಂದು ಬರೆದಿರುವ ಫಲಕದ ಕೆಳಗೆ, ಟಿಕೆಟ್ ಗುಮಾಸ್ತೆ ನಿಮ್ಮ ಮುಂದಿರುವವನಿಗೆ ಐದು ಟಿಕೆಟ್‌ಗಳನ್ನು ನೀಡಿ, "ಹೌಸ್‌ಫುಲ್" ಬೋರ್ಡನ್ನು ಮೇಲೇರಿಸಿ ಕಿಟಕಿ ಮುಚ್ಚುತ್ತಾನೆ. ನೀವು,

ಅ) ಮ್ಯಾನೇಜರ್ ಆಫೀಸಿನ ಒಳಗೆ ನುಗ್ಗಿ, ಗುಮಾಸ್ತ ಮಾಡಿದ ಅಕ್ಷಮ್ಯ ಅಪರಾಧಕ್ಕಾಗಿ ಅವನನ್ನು ವಜಾ ಮಾಡಲು ಕೂಗಾಡಿ, ಸುಸ್ತಾಗಿ ಮನೆಗ ಬರುತ್ತೀರ.

ಆಕಸ್ಮಾತ್ತಾಗಿ ತಪ್ಪಿದ ಅನಾಹುತಕ್ಕಾಗಿ ದೈವವನ್ನು ಮನಸಾರೆ ವಂದಿಸಿ. ಕಬ್ಬನ್‌ಪಾರ್ಕಿನಲ್ಲಿ ಕಡಲೇಕಾಯಿ ತಿಂದು ಸಂತಸದಿಂದ ಮನೆಗೆ ತೆರಳು ತ್ತೀರ.

ಇ) ಚಿತ್ರ ನೋಡಲೇ ಬೇಕೆಂಬ ಹಠದಿಂದ ಬ್ಲಾಕ್‌ನಲ್ಲಿ ಟಿಕೆಟಿಗೆ ಪರದಾಡಿ, ಒಂದಕ್ಕೆ ಮೂರರಷ್ಟು ತೆತ್ತು, ಕತ್ತಲಲ್ಲಿ ಎಡವಿ ಬಿದ್ದು, ಕೊನೆಗೂ ಸಕ್ಕತ್ ಬೋರ್ ಹೊಡೆವ ಚಿತ್ರ ನೋಡಿ, ಮೊದಲಿಗಿಂತ ವ್ಯಗ್ರ ಮನಸ್ಥಿತಿಯಲ್ಲಿ ಹಿಂತಿರುಗುತ್ತೀರ.

೬) ನಿಮ್ಮಾಕೆ "ಹಾಲನ್ನ ಒಲೇ ಮೇಲಿಟ್ಟಿದೇನೆ. ಉಕ್ಕುಕ್ಕೆ ಮುಂಚೆ ಇಳಿಸಿ, ಅರ್ಧ ಘಂಟೇಲಿ ಬರುತ್ತೇನೆ" ಎಂದು ಆಜ್ಞೆ ನೀಡಿ. ಹೊರಗೆ ಹೋಗುತ್ತಾಳೆ. ಪತ್ನೀ ಭಕ್ತರಾದ ನೀವು ತದೇಕ ಚಿತ್ತದಿಂದ ಹಾಲನ್ನೇ ನೋಡುತ್ತಿರುವಾಗ ಹೊರ ಬಾಗಿಲಿನ ಕರೆ ಘಂಟೆ 'ಟ್ರಿನ್' ಗುಟ್ಟುತ್ತದೆ. ಹೋಗಿ ನೋಡಿದರೆ, ಬಾಗಿಲಲ್ಲಿ ಮೋಹಕ ಮಂದಹಾಸ ಬೀರುತ್ತಾ ಒಬ್ಬ ಅಪ್ಸರೆ ನಿಂತಿದಾಳೆ. "ಹೊಸಾ ಹೊಸ ಸೋಪ್ ಪುಡಿ, ಬಹಳಾ ಬೆಳ್ಳಗೆ ಒಗೆಯುತ್ತೇ ಸಾರ್, ಒಳಗೆ ಬಂದು ಇದರ ಗುಣ ಗಾನ ಮಾಡಬಹುದೇ ?" ಅಂತ ಅತಿ ಮೃದುವಾಗಿ ಕೇಳುತ್ತಾಳೆ. ಗಂಟಲು ಒಣಗಿರುವ ಕಾರಣ ನೀವು ಮಾತನಾಡಲಾಗದೇ, ಸುಮ್ಮನೆ ಬಾಗಿಲು ತೆರೆದು, ಕುರ್ಚಿ ತೋರಿಸುತ್ತೀರ. ಸೋಪ್ ಪುಡಿಯ ಗುಣಕಥನದಲ್ಲಿ ಮೈಮರೆತಿರುವಾಗ, ಆಕೆಯೇ "ಏನೋ ಸೀದ ವಾಸನೆ ಬರುತ್ತಲ್ಲಾ ಸಾರ್" ಅಂತ ಕೇಳೋ ಹೊತ್ಗೆ, ನಿಮ್ಮಾಕೆ ಒಳಗೆ ಬರುತ್ತಾಳೆ. ಪರಿಸ್ಥಿತಿಯನ್ನರಿತ ಅಪ್ಸರೆ ಮೆಲ್ಲಗೆ ಹೊರಕ್ಕೆ ಜಾರುತ್ತಾಳೆ. ನೀವು,

ಅ) "ಹ್ಯಾಗೂ ಸೋಪು ಪುಡಿ ಖಾಲಿಯಾಗಿತ್ತಲ್ಲಾ.................." ಅಂತ ಶುರು ಮಾಡಿ...............ಕೊನೆಗೆ "ಹೇಳಿ, ಫಲವೇನ್ ? ಎಂದು ಮುಗಿಸು ತ್ತೀರ.

ಆ) ಅತ್ಯಂತ ಶಾಂತ ಮುಖ ಮುದ್ರೆಯಿಂದ "ನಮ್ ಬಾಸ್ ಸೆಕ್ರೆಟ್ರಿ ಬಂದಿದ್ಲು. ಅರ್ಜೆಂಟಾಗಿ ಬಾಸ್‌ನ ನೋಡಬೇಕಂತೆ. ಅದಕ್ಕೇ ರಜಾ ತಗೊಂಡಿದ್ರೂ ಹೇಳಿಕಳಿಸಿದ್ರು. ಬಾಗಿಲು ಹಾಕ್ಕೋ, ಬರ್ತೀನಿ" ಅಂತ ಹೇಳಿ ಉತ್ತರಕ್ಕೆ ಕಾಯದೇ ಓಡುತ್ತೀರ.

೭) ಆಫೀಸ್‌ನಲ್ಲಿ ಟೈಪಿಸ್ಟ್ ಬಂದಿಲ್ಲ. ಅರ್ಜೆಂಟಾಗಿ ಒಂದು ಕಾಗದದ

ಮೂಲ ಪ್ರತಿ ಎರಡು ಕಾರ್ಬನ್ ಕಾಪಿ, ಟೈಪ್ ಮಾಡ ಬೇಕಾಗಿದೆ. ನೀವೇ ಕಾಗದ, ಕಾರ್ಬನ್ ಟೈಪ್‌ರೈಟರ್‌ಗೆ ತೊಡಿಸಿ, ಒಂದೇ ಬೆರಳಿನಲ್ಲಿ ಹುಷಾರಾಗಿ ತಪ್ಪಿಲ್ಲದೇ ಟೈಪ್ ಮಾಡಿ ಮುಗಿಸ್ತೀರ. ಕಾಗದ ತೆಗೆದ ಮೇಲೆ ತಿಳಿಯುತ್ತೆ, ಕಾರ್ಬನ್ ಷೀಟ್‌ನ ತಿರುಗ ಮುರುಗ ಹಾಕಿದ್ರಿ ಅಂತ. ಎರಡು ಕಾರ್ಬನ್ ಪ್ರತಿಗಳೂ ಖಾಲಿ! ನೀವು,

ಅ) ಲೀವ್ ತೊಗೊಂಡಿರೋ ಟೈಪಿಸ್ಟ್‌ನ, ಅಪ್ಪ, ಅಮ್ಮ, ಅಜ್ಜ, ಅಜ್ಜಿ ಇವರುಗಳ ಪುಣ್ಯನಾಮ ಸ್ಮರಣೆ ಮಾಡುತ್ತಾ ಕೊಡುತ್ತೀರ.

ಆ) ಪಕ್ಕದ XEROX ಅಂಗಡೀಗೆ ಹೋಗಿ, ಅವನು ಎರಡು ಪ್ರತಿ ತೆಗೆಯೋದ್ರಲ್ಲಿ, ಒಂದು ಕಾಫಿ ಕುಡಿದು, ಪ್ರತಿಗಳನ್ನ ಬಾಸ್‌ಗೆ ನೀಡುತ್ತೀರ.

ಇ) ಇನ್ನೇನು ಮಾಡೋದು, ನನ್ನ ಕರ್ಮ ಅಂತ, ಪುನಃ ಹೊಸಾ ಕಾಗದಾನ ಟೈಪ್‌ರೈಟರ್‌ಗೆ ತೊಡಿಸುತ್ತೀರ.

ನಿಮ್ಮ ಉತ್ತರಗಳೆಲ್ಲಾ (ಅ) ಅಥವಾ (ಇ) ಆಗಿದ್ದರೆ ಇಷ್ಟು ಹೊತ್ತಿಗೆ ನಿಮ್ಮ ರಕ್ತದ ಒತ್ತಡ ಒಂದು ಸಾವಿರಕ್ಕೆ ಏರಿರಬೇಕು. ಬೇಗ ಟಿ.ಎಂ. ಶುರು ಮಾಡಿ. ನಿಮ್ಮ ಉತ್ತರ ಬಹುಮಟ್ಟಿಗೆ (ಆ) ಆಗಿದ್ದರೆ, ಸಮಯ ಸ್ಫೂರ್ತಿಯನ್ನುಪಯೋಗಿಸಿ, ಸಂದಿಗ್ಧ ಪರಿಸ್ಥಿತಿಯಿಂದ ಪಾರಾಗುವ ಕಲೆ ನಿಮಗೆ ತಿಳಿದಿದೆ. ಆದರೆ ಇತರರನ್ನ ಮೋಸಗೊಳಿಸುವ ಭರಾಟೇಲಿ, ನಿಮ್ಮನ್ನ ನೀವೇ ಮೋಸಗೊಳಿಸಿಕೊಳ್ಳುವ ಡೇಂಜರ್ ಇರುತ್ತೆ, ಹುಷಾರಾಗಿರಿ.

ಚುಂಬನ

ಪರಸ್ಪರರ ಎಂಜಲ ವಿನಿಮಯ.

ಪ್ರಸನ್ನತೆ

ಪ್ರಪಂಚದ ಇರಚುಗಳಿಗೆ (Axles) ಗ್ರೀಸ್ ಹಚ್ಚುವುದು.

ನಿಮ್ಮ ಬುದ್ಧಿಗೊಂದು ಸವಾಲು

—ಚಂದ್ರು

ಮೊನ್ನೆ ಎರ್ನಾಕುಲಂಗೆ ಹೋಗಿದ್ದಾಗ ಒಂದು ಕುತೂಹಲಕಾರಕ ವಿಷಯ ಬೆಳಕಿಗೆ ಬಂತು. ಎರ್ನಾಕುಲಂಗೆ ಸುಮಾರು ಇಪ್ಪತ್ತು ಕಿಲೋಮೀಟರು ದೂರ ದಲ್ಲಿ ನದಿ ಮಧ್ಯೆ ಒಂದು ನಡುಗಡ್ಡೆ ಇದೆ. ಆ ನಡುಗಡ್ಡೇಲಿರೋ ನಾಲ್ಕು ಮುಖ್ಯ ಸ್ಥಳಗಳೆಂದರೆ, ಮಹಾಬಲಿ ದೇವಸ್ಥಾನ, ಮಾರ್ತಾಂಡ ಗುಡ್ಡ, ಕುಂಜು ಕಟ್ಟೆ, ಹಾಗೂ ಹದಿಮೂರನೆಯ ಶತಮಾನದ ಕಲ್ಲಿನ ಲೈಟ್ ಹೌಸ್. ದಂತಕಥೆಗಳ ಪ್ರಕಾರ ಒಂದು ಕಾಲದಲ್ಲಿ ಕುಪ್ರಸಿದ್ಧ ಸಮುದ್ರಗಳ್ಳರಾದ ಉನ್ನಿ, ನಾಯರ್, ಪಿಳ್ಳೆ ಹಾಗೂ ವರ್ಮ ಇವರುಗಳ ವಾಸಸ್ಥಾನವಾಗಿದ್ದ ಈ ನಡುಗಡ್ಡೆಯಲ್ಲಿ, ಈ ಮಹಾನ್ ಕಳ್ಳರು ತಮ್ಮ ಅಗಾಧ ನಿಧಿಗಳನ್ನು ಈ ಮುಂದೆ ತಿಳಿಸಿರುವಂತೆ ಹೂತಿಟ್ಟಿ ದ್ದರಂತೆ:

೧) ಉನ್ನಿಯ ನಿಧಿ ಮಹಾಬಲಿ ದೇವಸ್ಥಾನದ ವಾಯುವ್ಯಕ್ಕೆ ಹತ್ತು ಮೈಲಿ ದೂರದಲ್ಲಿ.

೨) ನಾಯರ್ ನಿಧಿ ಮಾರ್ತಾಂಡ ಗುಡ್ಡದ ಈಶಾನ್ಯಕ್ಕೆ ಹತ್ತು ಮೈಲಿ ದೂರದಲ್ಲಿ.

೩) ಪಿಳ್ಳೆಯ ನಿಧಿ ಕುಂಜು ಕಟ್ಟೆಯ ನೈಋತ್ಯಕ್ಕೆ ಹತ್ತು ಮೈಲಿ ದೂರ ದಲ್ಲಿ.

೪) ವರ್ಮನ ನಿಧಿ ಲೈಟ್ ಹೌಸ್‌ನ ಆಗ್ನೇಯಕ್ಕೆ ಹತ್ತು ಮೈಲಿ ದೂರ ದಲ್ಲಿ.

೫) ಪಿಳ್ಳೆಯ ನಿಧಿ ಲೈಟ್ ಹೌಸ್‌ನ ದಕ್ಷಿಣಕ್ಕೆ ಹತ್ತು ಮೈಲಿ ದೂರದಲ್ಲಿ.

ನಡುಗಡ್ಡೆಯ ನಾಲ್ಕು ಮುಖ್ಯ ಸ್ಥಳಗಳು ಒಂದು ಚಚ್ಚೌಕದ ಮೂಲೆಗಳಲ್ಲಿ

ದ್ದರೆ, ಹಾಗೂ ಮೇಲಿನ ಐದು ಹೇಳಿಕೆಗಳಲ್ಲಿ ನಾಲ್ಕು ಮಾತ್ರ ನಿಜವಾಗಿದ್ದರೆ, ಯಾರ ನಿಧಿ ಎಲ್ಲಿ ಹೂಳಲ್ಪಟ್ಟಿದೆ ಎಂದು ಹೇಳಬಲ್ಲಿರಾ ?

ಸರಿಯುತ್ತರ ಮುಂದಿನ ಸಂಚಿಕೆಯಲ್ಲಿ.

ಜನವರಿ ತಿಂಗಳ ಸಮಸ್ಯೆಗೆ ಸರಿಯುತ್ತರ ಕಳಸಿದವರು

(೧) ಶ್ರೀ ಕೆ.ಜಿ. ಮೊಕಾಶಿ....ಧಾರವಾಡ
(೨) ಶ್ರೀ ಎಸ್.ವಿ. ಯಕ್ಕುಂಡಿ....ಬೆಂಗಳೂರು
(೩) ಶ್ರೀಮತಿ ಎಂ.ಬಿ. ರತ್ನಮ್ಮ ಹೊಳಲ್ಕೆರೆ
(೪) ಶ್ರೀ ಎಸ್. ವಿನಾಯಕ ಶೇಟ್ ಕೊಣಂದೂರು

ಇವರೆಲ್ಲರಿಗೂ ಅಪರಂಜಿಯ ಅಭಿನಂದನೆಗಳು.

ಅ(ನ)ರ್ಥ ಕೋಶ

ಎಸ್ ವಿಶ್ವನಾಥ್

ಶಿಷ್ಟಾಚಾರ :

ವೆಯಿಟರ್‌ನನ್ನು ಕರೆಯಲೋಸುಗ ವ್ಹಿಷಲ್ ಹಾಕಲು ಬಾಯಿಗೆ ಯಾವ ಯಾವ ಬೆರಳುಗಳನ್ನು ಹಾಕಿಕೊಳ್ಳಬೇಕೆಂದು ತಿಳಿದಿರುವವ.

ಪ್ರವೀಣ :

ತಾನು ನಿನ್ನೆ ಹೇಳಿದ್ದು ಇವೊತ್ತು ಏಕೆ ಆಗಲಿಲ್ಲ ಎಂದು ನಾಳೆಗೆ ಗೊತ್ತಾಗುವವ.


ನಾಯಿ :

ಕೆಲವು ಜನರು ವಾಕ್ ಹೋಗಲು, ಉಳಿದಿರುವ ಕಾರಣಗಳಲ್ಲೊಂದು.

ಮದುವೆ

Ways ಮತ್ತು Means ಇರುವ ಇಬ್ಬರ Committee ಯೇ ಈ ಮದುವೆ. ಅವಳಿಗೆ Way ಸಿಗುತ್ತದೆ ; ಇನ್ನೊಬ್ಬ ಆಕೆಗೆ Means ನ್ನು ಒದಗಿಸುತ್ತಾನೆ.

ಶುಭಾಶಯಗಳೊಂದಿಗೆ



ವೆನಿಟಕ್ ಫೌಂಡ್ರೀಸ್

ಬಿ-42 ಮೊದಲನೇ ಹಂತ

ಪೀಣ್ಯ ಕೈಗಾರಿಕಾ ಕ್ಷೇತ್ರ

ಬೆಂಗಳೂರು-560 058

ಉತ್ತಮ ದರ್ಜೆಯ ನಾನ್‌ಫೆರಸ್ ಕ್ಯಾಸ್ಟಿಂಗ್ ತಯಾರಕರು
ಹಾಗೂ ನಿಖರ ಟರ್ನಿಂಗ್

